

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SK NEWS ಕನ್ನಡ

SIHI KAHI

KANNADA DAILY MORNING

BAGALKOT

Volume : 07 | Issue : 277 | Thursday 17-07-2025 | E-mail : maruti.b.hosamani76@gmail.com | Page: 4 | Price : Rs. 1/-


## ರಾಷ್ಟ್ರೀಯ ಸಾರ್ವತ್ರಿಕ-ಲಸಿಕಾ ಕರಣ ಜಾಗೃತಿ ಕಾರ್ಯಕ್ರಮ

**ಸಿಹಿ ಕಹಿ ಸುದ್ದಿ, ಅಮೀನಗಡ :** ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ ಬಾಗಲಕೋಟ, ತಾಲೂಕಾ ಆರೋಗ್ಯ ಅಧಿಕಾರಿಗಳು ಹುನಗುಂದ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಅಮೀನಗಡ ಸಹಯೋಗದಲ್ಲಿ, ಅಮೀನಗಡ ಉಪ ಕೇಂದ್ರ ಎ&ಬಿ ಅಮೀನಗಡ ಶ್ರೀಮಂಗಳಮ್ಮ ದೇವಿ ಗುಡಿಯ ಆವರಣದಲ್ಲಿ "ರಾಷ್ಟ್ರೀಯ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ ಅಭಿಯಾನ" ಆಯೋಜಿಸಲಾಗಿತ್ತು. ಪ್ರಾಸ್ತಾವಿಕವಾಗಿಆರೋಗ್ಯನಿರೀಕ್ಷಣಾಧಿಕಾರಿ ಎಸ್.ಎಸ್ ಅಂಗಡಿಯವರು, "ಮಕ್ಕಳಲ್ಲಿ ಒಂಬತ್ತು ಮಾರಕ ರೋಗಗಳ ತಡೆಗೆ ಲಸಿಕೆಗಳು ಮಕ್ಕಳಿಗೆ ಸಂಜೀವಿನಿ" "ನಿಮ್ಮ



ಮಗುವಿಗೆ ಲಸಿಕೆ ಹಾಕಿಸಿ ಆರೋಗ್ಯವಂತ ಮಕ್ಕಳು ಸಮಾಜದ ಬೆಳಕು" ಎಂಬ ಘೋಷ ವಾಕ್ಯಯೊಂದಿಗೆ ಮಗುವಿಗೆ ಸರಿಯಾದ ಸಮಯಕ್ಕೆ ಲಸಿಕೆಯನ್ನು ಕೊಡಿಸುವುದು ಪಾಲಕರ ಜವಾಬ್ದಾರಿ. ಬಾಲಕ್ಷಯ, ಪೋಲಿಯೋ, ನಾಯಿ ಕೆಮ್ಮು ಗಂಟಲು ಮಾರಿ, ವಾಂತಿ ಬೇಧಿ, ಬಿಳಿ ಕಾಮಾಲೆ, ನಂಜುರೋಗ ದಡಾರ ಅಂಧತ್ವ ತಡೆಗೆ ಮಗುವಿನ ವಯಸ್ಸಿಗೆ ಅನುಸಾರ ಲಸಿಕೆ ಹಾಕಲಾಗುವುದು ಪ್ರಾಥಮಿಕ ಆರೋಗ್ಯ ಕೇಂದ್ರ, ಉಪ ಆರೋಗ್ಯ ಕೇಂದ್ರಗಳಲ್ಲಿ ಪ್ರತಿ ತಿಂಗಳು ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದ ಸದುಪಯೋಗ ಪಡೆದು ಕೊಳ್ಳಬೇಕು ಎಂದರು. ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಲ್ಲಿ ಹಿರಿಯ ಪ್ರಾಥಮಿಕ ಸುರಕ್ಷಾ ಅಧಿಕಾರಿ ಶ್ರೀಮತಿ ಕಮಲಾ ಪ್ರಾಥಮಿಕ ಸುರಕ್ಷಾ ಅಧಿಕಾರಿಗಳಾದ ಸಿ.ಎಚ್ ಕೊಲಕಾರ ನಯನಾ ಗೌಡರ ಆಶಾ ಕಾರ್ಯಕರ್ತೆಯರುಅಮೀನಗಡಪಟ್ಟಣದ ತಾಯಿಂದಿರು ಗರ್ಭಿಣಿಯರು, ಅರ್ಹ ಲಸಿಕಾ ಕರಣ ಜಾಗೃತಿ ಕಾರ್ಯಕ್ರಮದಲ್ಲಿ ಮುದ್ದು ಕಂದಮ್ಮಗಳು ಭಾಗವಸಿದ್ದರು.

## ಎಸ್.ಡಿ.ಎಮ್.ಸಿ ಅಧ್ಯಕ್ಷರಾಗಿ ಅಂದಪ್ಪ ಮಾದರ, ಹಾಗೂ ಉಪಾಧ್ಯಕ್ಷರಾಗಿ ಕವಿತಾ ಆದಿ ಆಯ್ಕೆ

**ಸಿಹಿ ಕಹಿ ಸುದ್ದಿ,**

**ಜಕ್ಕಲಿ :** ರೋಣ ತಾಲೂಕಿನ ಜಕ್ಕಲಿ ಗ್ರಾಮದ ಸರ್ಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ನೂತನ ಎಸ್ಡಿಎಂಸಿ ಅಧ್ಯಕ್ಷರಾಗಿ ಅಂದಪ್ಪರಾಮಪ್ಪಮಾದರ,ಉಪಾಧ್ಯಕ್ಷರಾಗಿ ಕವಿತಾ ಆದಿ, ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಹೆಣ್ಣು ಮಕ್ಕಳ ಶಾಲೆಯ ಅಧ್ಯಕ್ಷರಾಗಿ ವೀರಪ್ಪ ಮುಕ್ಕಣ್ಣವರ, ಉಪಾಧ್ಯಕ್ಷರಾಗಿ ಬಸಮ್ಮ ಹೊಸಮನಿ ಅವರನ್ನು ನೇಮಕ ಮಾಡಲಾಯಿತು.

ಸರ್ಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆ ಒಟ್ಟು 18 ಜನ ಸದಸ್ಯರನ್ನು ಒಳಗೊಂಡಿದ್ದು, ನೂತನ ಅಧ್ಯಕ್ಷರಾಗಿ ಅಂದಪ್ಪ ಮಾದರ,ಉಪಾಧ್ಯಕ್ಷರಾಗಿ ಕವಿತಾ ಆದಿ, ಸದಸ್ಯರಾಗಿ ಮುತ್ತಪ್ಪ ಕಾಳಿ,ಕಳಕಪ್ಪ ರಂಗಣ್ಣವರ, ರಜಾಕ್ ಅಮ್ಮದ ಗಡಾದ, ಬಸಪ್ಪ ಚಿನ್ನೂರು, ಬಸಪ್ಪ ಬಂಡಿ, ಕುಬೇರಪ್ಪ



ಕೊಡಗಾನೂರು, ಶರಣಪ್ಪ ಕೋರಿ, ಮುತ್ತಪ್ಪ ಮರಬಸಪ್ಪನವರ, ಶಾರದಾ ಜೋಗಿನ, ಅನ್ನಪೂರ್ಣ ಚಲವಾದಿ, ಗಂಗವ್ವ ರಂಗಣ್ಣವರ, ಚಾಂದಬಿ ಗಡಾದ, ಲಲಿತಾ ಪಾಟೀಲ, ಶರಣಮ್ಮ ಬಂಡಿ, ಕವಿತಾ ಪಾಟೀಲ, ಸಾವಿತ್ರಿ ಕಮ್ಮಾರ ಅವರನ್ನು ಆಯ್ಕೆ ಮಾಡಲಾಯಿತು.

ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಹೆಣ್ಣು ಮಕ್ಕಳ ಶಾಲೆ 18 ಸದಸ್ಯರನ್ನು ಒಳಗೊಂಡಿದ್ದು, ಅದರಲ್ಲಿ ಅಧ್ಯಕ್ಷರಾಗಿ ವೀರಪ್ಪ ಮುಕ್ಕಣ್ಣವರ, ಉಪಾಧ್ಯಕ್ಷರಾಗಿ ಬಸಮ್ಮ ಹೊಸಮನಿ, ಸದಸ್ಯರಾಗಿ ಕವಿತಾ ಮಾದರ, ಕನಕಪ್ಪ ಮಾದರ, ವಿದ್ಯಾ ಕಲ್ಲಿಗನೂರ, ಸಂಗಪ್ಪ ಕೀಟಗೇರಿ, ರಮೇಶ ರಂಗಣ್ಣವರ, ಸೈನಾಜಬೇಗಂ ಬಾಲೆ ಸಾಬನವರ, ಶೋಬಾ ಬಾರಕೇರ, ಮಹಮ್ಮದಸಲೀಂ ಜಕ್ಕಲಿ, ಹನಂತಪ್ಪ ಭಜೇಂತ್ರಿ, ಮಹಾಂತೇಶ ಕೌಜಗೇರಿ, ಮಂಜುನಾಥ ಶಿವಸಂಪರ ರಮೇಶ ಹೊಸಮನಿ, ಮಂಜುಳಾ ತುಕ್ಕೋಜಿ, ಸುಧಾ ಜಂಗಣ್ಣವರ, ಹೇಮಾ ರೋಣದ, ಬಸವಣ್ಣೆವ್ವ ಜಗ್ಗಲ ಅವರನ್ನು ಆಯ್ಕೆ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಎರಡು ಶಾಲೆಯ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರು ಸೇರಿದಂತೆ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು ಎಂದು ವರದಿಯಾಗಿದೆ.

## ಗ್ರಾಮ ಪಂಚಾಯಿತಿಯಲ್ಲಿ ಅಂಧಾ ದರ್ಬಾರ್ ಪಿಡಿಓ ಜುಬೇರ್ ನಾಯಕನ-ಕರ್ಮಕಾಂಡ ಬಯಲು



**ಸಿಹಿ ಕಹಿ ಸುದ್ದಿ,**



**ಬೋಗಾವತಿ :** ಸರಕಾರದ ಹಣ ಯಾವ ರೀತಿ ಲೂಟಿ ಮಾಡಬೇಕು ಎಂದು ಮಾನ್ವಿಗೆ ಬಂದು ಕಲಿಯಬೇಕು. ಯಾಕಂದರೆ ಮಾನ್ವಿ ತಾಲೂಕಿನ ಬೋಗಾವತಿ ಗ್ರಾಮ ಪಂಚಾಯತಿಯ ಪಿಡಿಓ ಜುಬೇರ್ ನಾಯಕ ಸದಸ್ಯರ ಅನುಮತಿ ಇಲ್ಲದೆ ಲಕ್ಷಾಂತರ ಹಣ ದುರ್ಬಳಕೆ ಮಾಡಿದ್ದು, ತನಿಖೆ ಮಾಡಬೇಕು ಎಂದು ಸದಸ್ಯರೆ ಆಗ್ರಹಿಸಿದ್ದಾರೆ. ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕ ಅಂದರೆ ಸಾಕು ಸರಕಾರದ ಯಾವ ರೀತಿ ಲೂಟಿ ಮಾಡಲಾಗಿದೆ ಎಂದು ಬೋಗಾವತಿ ಗ್ರಾಮ ಪಂಚಾಯತಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೆ ತನಿಖೆ ಮಾಡಿದರೆ ಭಯ ಗೊಳ್ಳುವುದು ಗ್ಯಾರಂಟಿ. ಮಾನ್ವಿ ತಾಲೂಕ ಪಂಚಾಯತಿ ಇ.ಓ ಖಾಲಿದ್ ಅಹ್ಮದ್ ಅವರಿಗೆ ದೂರು ಸಲ್ಲಿಸಿದರು ಸಹ ಪಿಡಿಓ ಜುಬೇರ್ ನಾಯಕ ಜೊತೆ ಶಾಮೀಲಾಗಿ ಹಣ ಲೂಟಿ ಮಾಡಿದ್ದಾರೆಂದು ಸದಸ್ಯರು ಆರೋಪಿಸಿದ್ದು, ಇ.ಓ ಖಾಲಿದ್ ಅಹ್ಮದ್ ಅವರು ಸರಿಯಾಗಿ ಆಡಳಿತ ನಡೆಸದ ಕಾರಣ ಮಾನ್ವಿ ತಾಲೂಕಲ್ಲಿ ದುರಾಡಳಿತ ಹೆಚ್ಚಾಗಲು ಕಾರಣವಾಗಿದೆ.

**ತಾಲೂಕು ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್ ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಶ್ರೀ ಕನ್ನಿಕಾ ಪರಮೇಶ್ವರಿಗೆ ವಿಶೇಷ ಅಲಂಕಾರ, ಪೂಜೆ ಪಲ್ಲಕ್ಕಿ ಸೇವೆ



ಕೂಡ್ಲಿಗಿ :ಶ್ರೀಕನ್ನಿಕಾ ಪರಮೇಶ್ವರಿ ವಿಶೇಷ ಆರಾಧನೆ

**ಸಿಹಿ ಕಹಿ ಸುದ್ದಿ,**

**ಕೂಡ್ಲಿಗಿ :** ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕೂಡ್ಲಿಗಿ ಪಟ್ಟಣದ ಹೃದಯ ಭಾಗದಲ್ಲಿರುವ ಶ್ರೀಕನ್ನಿಕಾ ಪರಮೇಶ್ವರಿ ದೇವಸ್ಥಾನದಲ್ಲಿ. ಜು 15 ರಂದು ಅಷಾಡ ಮಂಗಳವಾರ ದಂದು ಶ್ರೀಕನ್ನಿಕಾ ಪರಮೇಶ್ವರಿ ತಾಯಿಗೆ ವಿಶೇಷ ಅಲಂಕಾರ ಪೂಜೆ ಹಾಗೂ ಪಲ್ಲಕ್ಕಿ ಸೇವೆ ಭಜನಾರಾಧನೆ ಜರುಗಿತು. ಅರ್ಚಕರಾದ ಗುರುಸ್ವಾಮಿರವರ ನೇತೃತ್ವದಲ್ಲಿ ಶ್ರೀಕನ್ನಿಕಾ ಪರಮೇಶ್ವರಿ ಸೇವಾ ಸಮಿತಿಯವರು. ಆಷಾಢ ಮಾಸದ ಮಂಗಳವಾರ ದಂದು ದೇವಿಗೆ ವಿಶೇಷ ಅಲಂಕಾರ ಪೂಜೆ ಪಲ್ಲಕ್ಕಿ ಸೇವೆ ಹಾಗೂ ಭಜನಾರಾಧನೆಯನ್ನು ಸಲ್ಲಿಸಿದರು. ಅಲ್ಲದೇ ಆಷಾಡ ಮಾಸದ ಮಂಗಳವಾರದ ಪ್ರಯುಕ್ತ ಪಟ್ಟಣದ ವಿವಿದ ದೇವಸ್ಥಾನಗಳಲ್ಲಿನ ದೇವರಿಗೆ ವಿಶೇಷ ಆರಾಧನೆ ಸೇವೆ ಸಲ್ಲಿಸಲಾಯಿತು. ಪಟ್ಟಣದ ಆರಾಧ್ಯ ದೇವ ಗ್ರಾಮ ದೇವತೆ ಶ್ರೀ ಊರಮ್ಮ ದೇವಿ, ಶ್ರೀ ಕೊತ್ತಲಾಂಜನೇಯ, ಶ್ರೀವೆಂಕಟೇಶ್ವರ, ಶ್ರೀ ಕೊತ್ತಲಾಂಜನೇಯ, ಶ್ರೀಸೊಲ್ಲಮ್ಮದೇವಿಯ, ವಿಶೇಷ ಪೂಜೆ ಹಾಗೂ ಆರಾಧನೆ ಜರುಗಿಸಲಾಯಿತು. ಆಷಾಢ ಮಾಸದಲ್ಲಿ ಈ ರೀತಿ ವಿಶೇಷ ಪೂಜೆಯನ್ನು ಮಾಡುವುದರಿಂದ ಭಕ್ತರು ತಮ್ಮ ಇಷ್ಟಾರ್ಥಗಳನ್ನು ಈಡೇರಿಸಿ ಕೊಳ್ಳಬಹುದಾಗಿದೆ. ಹಾಗೂ ಅವರು ಎಲ್ಲಾ ಬಗೆಯ ಫಲಗಳನ್ನು ದ್ವಿಗುಣವಾಗಿ ಪಡೆಯುವ ಫಲಿತಾಂಶ ಸಿಗುತ್ತದೆ ಎಂದು ಹೇಳಲಾಗುತ್ತದೆ. ಆಷಾಢ ಮಾಸದಲ್ಲಿ ಶ್ರೀಕನ್ನಿಕಾ ಪರಮೇಶ್ವರಿ ಮತ್ತು ಮಂಗಲ ದೇವರಿಗೆ ವಿಶೇಷ ಅಲಂಕಾರ ಪೂಜೆ ಭಜನೆ ಪಲ್ಲಕ್ಕಿ ಸೇವೆ ಸಲ್ಲಿಸುವುದರ ಜೊತೆಗೆ, ವೆಂಕಟೇಶ್ವರ, ಸೂರ್ಯ ದೇವ, ದುರ್ಗಾ ಮತ್ತು ಲಕ್ಷ್ಮಿ ದೇವಿಯರ. ಮತ್ತು ಆಂಜನೇಯನನ್ನು ಪೂಜಿಸುವುದು ಭಕ್ತರಿಗೆ ಅತ್ಯಂತ ಮಂಗಳಕರ ವೆಂದು ಪರಿಗಣಿಸಲಾಗಿದೆ. ಪ್ರತಿ ಮಂಗಳವಾರ ದಂದು ಶ್ರೀಕನ್ನಿಕಾ ಪರಮೇಶ್ವರಿ, ಹಾಗೂ ಹನುಮಂತನ ದೇವಸ್ಥಾನಕ್ಕೆ ತೆರಳಿ ಶ್ರದ್ಧಾ ಭಕ್ತಿಯಿಂದ ಪೂಜೆ ಸಲ್ಲಿಸುವುದರಿಂದ ವಿಶೇಷ ಫಲಗಳು ದೊರಕಲಿವೆ ಎಂದು ಹೇಳಲಾಗುತ್ತದೆ. ದೇವರ ಸನ್ನಿಧಾನದಲ್ಲಿ ದೇವರ ಮಂತ್ರಗಳ ಪಠನೆ ಭಜನಾರಾಧನೆ ಸೇವೆ ಮಾಡುವುದರಿಂದ, ಶ್ರೀಕನ್ನಿಕಾ ಪರಮೇಶ್ವರಿ ಹಾಗೂ ಮಂಗಳ ದೇವರಿಗೆ ಸಂಬಂಧಿಸಿದ ಮಂತ್ರಗಳನ್ನು ಪಠಿಸುವುದರಿಂದ. ಸಕಲ ಕಷ್ಟಗಳಿಂದ ಮುಕ್ತಿ, ಹಾಗೂ ಇಷ್ಟಾರ್ಥಗಳು ಸಿದ್ಧಿಸಿ ಲಭಿಸುವುದೆಂದು ಆಧ್ಯಾತ್ಮ ಚಿಂತಕರು ತಿಳಿಸಿದ್ದಾರೆ. ಆಷಾಢ ಮಾಸದಲ್ಲಿ ಇಷ್ಟ ದೇವ ಕುಲ ದೇವ ಗ್ರಾಮ ದೇವರ ಆರಾಧನೆಯಿಂದ, ಜೀವನದಲ್ಲಿ ಎದುರಾಗುವ ಕಷ್ಟಗಳು ದೂರವಾಗುತ್ತವೆ ಮತ್ತು ಸಕಲ ಭಾಗ್ಯಗಳು ಪ್ರಾಪ್ತಿ ಯಾಗುತ್ತವೆ ಎಂದು ಹೇಳಲಾಗುತ್ತದೆ. ಅಂತೆಯೇ ಶ್ರೀಕನ್ನಿಕಾ ಪರಮೇಶ್ವರಿ ದೇವಸ್ಥಾನದಲ್ಲಿ, ಆಷಾಢ ಮಂಗಳವಾರ ದಂದು ಪಟ್ಟಣದ ಆರ್ಯ ವೈಶ್ಯ ಸಂಘದವರು. ಶ್ರೀಕನ್ನಿಕಾ ಪರಮೇಶ್ವರಿ ದೇವರ ಸೇವಾ ಸಮಿತಿಯವರು, ದೇವಿಗೆ ವಿಶೇಷ ಅಲಂಕಾರ ಪಲ್ಲಕ್ಕಿ ಸೇವೆ ಭಜನಾರಾಧನೆ ಸೇವೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಆರ್ಯ ವೈಶ್ಯ ಸಮಾಜದ ನೂರಾರು ಮಹಿಳೆಯರು, ನೂರಾರು ಯುವಕರು ಹಿರಿಯರು ಮಕ್ಕಳು ಶ್ರೀಕನ್ನಿಕಾದೇವಿಯ ಆರಾಧನೆ ಸೇವೆಯಲ್ಲಿ ಭಾಗಿ ಯಾಗಿದ್ದರು ಎಂದು ವರದಿಯಾಗಿದೆ.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ರಾಘವೇಂದ್ರ. ಬಿ.ಸಾಲುಮನೆ. ಕೂಡ್ಲಿಗಿ**

## ಭಾರತೀಯ ಗುರುಭಕ್ತಿ ಪರಂಪರೆ ಶ್ರೇಷ್ಠವಾದುದು



**ಬನಹಟ್ಟಿ :** ಮಕ್ಕಳಲ್ಲಿಯ ಅಜ್ಞಾನವೆಂಬ ಕಳೆ ತೆಗೆದು ಸುಜ್ಞಾನವೆಂಬ ಫಲವತ್ತಾದ ಬೆಳೆ ಬೆಳೆಸುವವರೆ ಗುರು. ಇಂಥಹ ಗುರುವನ್ನು ಗೌರವಿಸಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಭಾರತೀಯ ಗುರು ಪರಂಪರೆ ಶ್ರೇಷ್ಠವಾದುದು ಎಂದು ಮಕ್ಕಳ ಸಾಹಿತಿ ಜಯವಂತ ಕಾಡದೇವರ ತಿಳಿಸಿದರು.

ಅವರು ಗುರುವಾರ ಇಲ್ಲಿನ ಜೇಡರ ದಾಸಿಮಯ್ಯ ಶಿಕ್ಷಣ ಸಂಸ್ಥೆಯಲ್ಲಿ ಹಮ್ಮಿಕೊಂಡ ಗುರು ಪೂರ್ಣಿಮೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಗುರುವಿನ ಗುಲಾಮನಾಗುವ ತನಕ ಮುಕುತಿ ದೊರೆಯದು ಎಂದು ನಂಬಿದವರು ಭಾರತೀಯರು. ಜನನಿಯೇ ಮೊದಲ ಗುರು. ಅಂತೆಯೇ ಗುರು ಪೂರ್ಣಿಮೆ ಸಂದರ್ಭದಲ್ಲಿ ಮಕ್ಕಳು ತಮ್ಮ ತಾಯಿಯ ಪಾದಪೂಜೆ ಮಾಡಿರುವುದು ಸ್ತುತ್ಯವಾದ ಸಂಗತಿಯಾಗಿದೆ ಎಂದು ಜಯವಂತ ಕಾಡದೇವರ ತಿಳಿಸಿದರು.

ಸಂಸ್ಥೆಯ ನಿರ್ದೇಶಕ ಶಶಿಕಾಂತ ಹುನ್ನೂರ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಂದಿನ ದಿನಗಳಲ್ಲಿ ನಾವೆಲ್ಲರೂ ಗುರುವಿನಮಹತ್ವವನ್ನುಅರಿತುಕೊಳ್ಳಬೇಕು.ಗುರುಗಳ ನಡೆ ನುಡಿಗಳನ್ನು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಸಂಸ್ಥೆಯ ನಿರ್ದೇಶಕಿ ಶಾಂತಾ ಸೋರಗಾಂವಿ ಕಾರ್ಯಕ್ರಮ ಉದ್ಘಾಟಿಸಿದರು.

ಮುಖ್ಯ ಶಿಕ್ಷಕಿ ಸುನಿತಾ ಸಿಂಗೆ, ಶಿವಯೋಗಿ ಬಂದಿ, ಚನ್ನಪ್ಪ ಕೆಬ್ಬಾಣಿ, ಪೂರ್ಣಿಮಾ ಬಾಗಲಕೋಟ, ಜ್ಯೋತಿ ಬೆಳ್ಳಾಡಿ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

## ಕುರಿಗಾಹಿಗಳ ಸಮಸ್ಯೆಗಳಿಗೆ ಸರಕಾರದಿಂದ ಶೀಘ್ರ ಪರಿಹಾರ

**ಜಮಖಂಡಿ :** ಸಾಂಪ್ರದಾಯಿಕ ಕುರಿಗಾಹಿಗಳ ಸಮಸ್ಯೆಗಳ ಪರಿಹಾರಕ್ಕೆ ರಾಜ್ಯ ಸರ್ಕಾರದಿಂದ ಶೀಘ್ರ ಪರಿಹಾರಕ್ಕೆ ಪ್ರಯತ್ನ ಮಾಡುವುದಾಗಿ ಮಾಜಿ ಶಾಸಕ ಆನಂದ ನ್ಯಾಮಗೌಡ ಭರವಸೆ ನೀಡಿದರು.

ನಗರದ ತಾಲೂಕಾಡಳಿತದ ಆವರಣದಲ್ಲಿ ಬುಧವಾರ ಸಾಂಪ್ರದಾಯಿಕ ಕುರಿಗಾಹಿಗಳ ಹಿತರಕ್ಷಣಾ ಕಾನೂನು ಹೋರಾಟ ಸಮಿತಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

ಸಾಂಪ್ರದಾಯಿಕ ಕುರಿಗಾಹಿಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವದು ಕಂಡಿದ್ದೇವೆ. ಅರಣ್ಯ ಸಚಿವ ಈಶ್ವರ ಖಂಡ್ರೆ ಅವರೊಂದಿಗೆ ಚರ್ಚಿಸಿ ತಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಕುರಿಗಾಹಿಗಳಿಗೆ ಅರಣ್ಯ ಪ್ರದೇಶದಲ್ಲಿ ಕುರಿಗಳನ್ನು ಮೇಯಿಸಲು ಅವಕಾಶ ಇರುವದಿಲ್ಲ.

ಈ ಎಲ್ಲ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದ ಗಮನ ಸೆಳೆಯಲಾಗುವದು. ಸನ್ 2024-25 ನೇ ಸಾಲಿನ ಬಜೆಟಟ್ ದಲ್ಲಿ ಕುರಿಗಾಯಿಗಳಿಗೆ ಸಂಬಂಧಿಸಿದಂತೆ ದೌರ್ಜನ್ಯ ತಡೆ ಕಾಯ್ದೆ ರೂಪಿಸಲು ಪ್ರಸ್ಥಾಪಿಸಿದ್ದು, ಈಗ ಸರ್ಕಾರದ ಮುಂದಿದೆ. ಅಧಿವೇಶನದಲ್ಲಿ ಮಸೂದೆಯನ್ನು ಕಾಯ್ದೆಯಾಗಿ ಸರಕಾರ ಜಾರಿಗೊಳಿಸಬೇಕೆಂದರು.

ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಮಾತನಾಡಿ, ರಾಜ್ಯದಲ್ಲಿ ಕುರಿಗಾರರ ಮೇಲೆ ನಿರಂತರವಾಗಿ ದೌರ್ಜನ್ಯಗಳು ನಡೆಯುತ್ತಿವೆ.

ಬಾದಾಮಿ ತಾಲೂಕಿನ ಉಗಲವಾಟ ಗ್ರಾಮದ ಕುರಿಗಾಯಿ ಶರಣಪ್ಪ ಜಮ್ಮನಕಟ್ಟಿ, ಬಸವಕಲ್ಯಾಣ ತಾಲೂಕಿನ ಕುರಿಗಾಯಿ ಪ್ರಭು ಮೇತ್ರಿ ಇವರನ್ನು ಕುರಿಗಳ್ಳರು ಭೀಕರವಾಗಿ ಕೊಲೆ ಮಾಡಿದ್ದು ಹಾಗೂ ಕುಂದಗೋಳ ತಾಲೂಕಿನಲ್ಲಿ ಲಕ್ಷ್ಮೀ ಕಳ್ಳಿಮನಿ ಕುರಿಗಾಯಿ ಮಹಿಳೆಯ ಮೇಲೆ ಅತ್ಯಾಚಾರ ಮಾಡಿ ಕೊಲೆ ಮಾಡಿರುವಂತಹ ನಿದರ್ಶನಗಳು ಮಾನವವೀಯತೆ ಕೂಡ ನಾಚಿಕೊಳ್ಳುವಂತ ಪರಿಸ್ಥಿತಿ ನಿರ್ಮಾಣವಾಗಿದೆ. ರಾಜ್ಯದಲ್ಲಿರುವ ಗುಡ್ಡುಗಾಡು ಪ್ರದೇಶಗಳಲ್ಲಿ ಕುರಿ ಮೇಸಲು ಹೋದಾಗ ಅರಣ್ಯ ಇಲಾಖೆ ಅಧಿಕಾರಿಗಳಿಂದ, ಸಿಬ್ಬಂದಿಗಳಿಂದ ನಿರಂತರ ಕಿರುಕುಳ, ದೌರ್ಜನ್ಯಗಳು ನಡೆಯುತ್ತಿವೆ.

ಪ್ರತಿಭಟನೆಯಲ್ಲಿ ನಗರಸಭೆ ಸದಸ್ಯ ಈಶ್ವರ ವಾಳೆನ್ನವರ,

ಯಲ್ಲಪ್ಪ ಹೆಗಡೆ, ಮಲ್ಲಿಕಾರ್ಜುನ ಬೆಕ್ಕೇರಿ, ಹೂವಪ್ಪ ಉಷಾಕಾರ, ಹನುಮಂತ ಯಮಗಾರ, ಶ್ರೀಶೈಲ ಭೂಮಾರ ಸಹಿತ ರೈತ ಸಂಘದವರು ಪಾಲ್ಗೊಂಡಿದ್ದರು. ನೂರಾರು ಸಂಖ್ಯೆಯಲ್ಲಿ ಕುರಿಗಳು ಪಾಲ್ಗೊಂಡಿರುವದು ಎಲ್ಲರ ಗಮನ ಸೆಳೆಯಿತು.

## ಮಣಿಪಾಲ ಆರೋಗ್ಯ ಕಾರ್ಡ್ 2025ರ ನೋಂದಣಿ ಪ್ರಾರಂಭ

**ಸಿಹಿ ಕಹಿ ಸುದ್ದಿ,**

**ತರೀಕೆರೆ :** ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಮಣಿಪಾಲವು ಕರ್ನಾಟಕ ಮತ್ತು ನೆರೆಯ ರಾಜ್ಯಗಳ ದಾದ್ಯಂತ ಲಕ್ಷಾಂತರ ಕುಟುಂಬಗಳಿಗೆ ಕೈಗೆಟ್ಟುಕುವದರದಲ್ಲಿಆರೋಗ್ಯಸೇವೆಯನ್ನು ಒದಗಿಸುತ್ತಿದೆ ಎಂದು ಕಸ್ತೂರ್ಬಾ ಆಸ್ಪತ್ರೆ ವ್ಯವಸ್ಥಾಪಕರಾದಶ್ರೀಮೋಹನ್ಶೆಟ್ಟಿರವರು ಇಂದು ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು. ಮಣಿಪಾಲ ಆರೋಗ್ಯ ಕಾರ್ಡ್ 2025 ರ ನೋಂದಣಿ ಪ್ರಾರಂಭವಾಗಿದೆ. ಇದರ ಸದುಪಯೋಗವನ್ನು ತರೀಕೆರೆ ಮತ್ತು ತಾಲೂಕಿನ ಸುತ್ತ ಮುತ್ತಲಿನ ಗ್ರಾಮಸ್ಥರು, ಸಾರ್ವಜನಿಕರು ಇದರ ಉಪಯೋಗ ಪಡೆದು ಕೊಳ್ಳಬೇಕೆಂದು ಹೇಳಿದರು. ಮಾಹೆ ಮಣಿಪಾಲದ ಸಹ ಕುಲಾಧಿಪತಿ




ಡಾ, ಎಚ್.ಎಸ್ ಬಲ್ಲಾಳರು ಘೋಷಿಸಿದ್ದಾರೆ ಎಂದು ತಿಳಿಸಿದರು. ಮಣಿಪಾಲ ಸಂಸ್ಥೆಯ ಸಮಸ್ಥಾಪಕ ಡಾ, ಪಿ.ಎಂ.ಎ ಪೈ ಅವರ ದೂರ ದೃಷ್ಟಿಯ ನಾಯಕತ್ವವನ್ನು ನೆನಪಿಸಿದರು. ಮಾಹೆ ಕುಲಾಧಿಪತಿ ಡಾ, ರಾಮದಾಸ್.ಎಂ ಪೈ ಅವರ ಮಾರ್ಗದರ್ಶನದಲ್ಲಿ 2000 ಇಸ್ವಿಯಲ್ಲಿ ಪ್ರಾರಂಭಿಸಲಾದ ಮಣಿಪಾಲ ಆರೋಗ್ಯ ಕಾರ್ಡ್ ಯೋಜನೆಯು ಈಗ ರಜತ ಮಹೋತ್ಸವದ ಮೈಲುಗಲ್ಲನ್ನು ತಲುಪಿದೆ 25 ವರ್ಷಗಳಲ್ಲಿ ಇದು ಕೋಟ್ಯಂತರ ಫಲಾನುಭವಿಗಳ ಜೀವನವನ್ನು ಮುಟ್ಟಿದೆ ಎಂದಿದ್ದಾರೆ. ಮಾರುಕಟ್ಟೆ ವಿಭಾಗದ ಪ್ರತಿ ನಿಧಿಯಾದ ಅನಿಲ್ ಮಾತನಾಡಿ ಮಣಿಪಾಲದ ಕಸ್ತೂರಿಬಾ ಆಸ್ಪತ್ರೆಯಲ್ಲಿ ಕಾರ್ಡುದಾರರಿಗೆ ತಜ್ಞ ಮತ್ತು ಸೂಪರ್ ಸ್ಪೆಷಾಲಿಟಿ, ಸಮಾಲೋಚನೆ ವ್ಯವಸ್ಥೆ ಇದೆ ರೋಗ ನಿರ್ಣಯ ಮತ್ತು ಪ್ರಯೋಗಾಲಯ ಪರೀಕ್ಷೆಗಳು ಸಹ ಲಭ್ಯವಿದೆ ರೇಡಿಯೋಲಜಿ, ಒಪಿಡಿ ಮತ್ತು ಮಧುಮೇಹ ಪಾದದ ಹಾರೈಕೆಯ ಮೇಲೆ ರಿಯಾಯಿತಿ ಪ್ರಯೋಜನಗಳು, ಡಯಾಲಿಸಿಸ್ ಮತ್ತು ಆಸ್ಪತ್ರೆ ಔಷಧಿಗಳ ಮೇಲೆ ಹತ್ತು ಪರ್ಸೆಂಟ್ ರಿಯಾಯಿತಿ ವ್ಯವಸ್ಥೆ ಇದೆ ಎಂದು ತಿಳಿಸಿದರು. ಪತ್ರಕರ್ತರಾದ ತರೀಕೆರೆ ಎನ್ ವೆಂಕಟೇಶ್ ಮಾತನಾಡಿ ಕಸ್ತೂರಿಬಾ ಮಣಿಪಾಲರವರು ಪತ್ರಕರ್ತರಿಗೆ ಉಚಿತ ಚಿಕಿತ್ಸಾವ್ಯವಸ್ಥೆಏರ್ಪಡಿಸಿದ್ದುಈವ್ಯವಸ್ಥೆಯು ಪತ್ರಕರ್ತರ ಕುಟುಂಬಗಳಿಗೂ ಸಹ ತುಂಬಾ ಉಪಯುಕ್ತವಾಗಿದೆ ಎಂದು ತಿಳಿಸಿದರು. ಪತ್ರಕರ್ತರ ಸಂಘದ ಅಧ್ಯಕ್ಷರಾದ ಬಿ.ಕೃಷ್ಣ ನಾಯಕ್ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪತ್ರಕರ್ತರಾದ ಶಶಿಧರ್ ಅಭಿನಂದನೆ ತಿಳಿಸಿದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಎನ್.ವೆಂಕಟೇಶ್. ತರೀಕೆರೆ.ಚಿಕ್ಕಮಗಳೂರು**

## ವಿದ್ಯಾರ್ಥಿಗಳು ಸಾಮಾಜಿಕ ಜಾಲತಾಣಗಳಿಂದ ದೂರವಿರಿ; ಮಧು ಎಲ್.



**ಮಹಾಲಿಂಗಪುರ:** ಕಲಿಕಾ ಹಂತದಲ್ಲಿ ವಿದ್ಯಾರ್ಥಿಗಳು ಸಾಧ್ಯವಾದಷ್ಟು ಸಾಮಾಜಿಕ ಜಾಲತಾಣಗಳಿಂದ ದೂರ ಇರಲು ಪ್ರಯತ್ನಿಸಬೇಕು. ಅಭ್ಯಾಸದ ಕಡೆಗೆ ಹೆಚ್ಚಿನ ಕಾಳಜಿವಹಿಸಿ ಉನ್ನತ ಅಧ್ಯಯನ ಮಾಡಿ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ಸ್ಥಳೀಯ ಪೊಲೀಸ್ ಠಾಣೆಯ ಅಪರಾಧ ವಿಭಾಗದ ಎಸ್ಸೈ ಮಧು ಎಲ್. ಹೇಳಿದರು.

ಪಟ್ಟಣದ ಬುದ್ನಿ ಪಿ.ಡಿ.ಯಲ್ಲಿನ ಅಕ್ಷರ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ನಡೆದ ಪ್ರಥಮ ವರ್ಷದ ವಾಣಿಜ್ಯ ಮತ್ತು ವಿಜ್ಞಾನ ವಿಭಾಗದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದಲ್ಲಿ ಮುಖ್ಯಅತಿಥಿಗಳಾಗಿ ಭಾಗವಹಿಸಿದ್ದ ಅವರು ವಿದ್ಯಾರ್ಥಿಗಳಲ್ಲಿ ಪ್ರಾಥಮಿಕ ಕಾನೂನಿನ ಅರಿವು ಇರಬೇಕು. ವಾಹನ ಚಾಲನಾ ಪರವಾನಿಗೆ ಇಲ್ಲದೆ ಬೈಕ್ ಓಡಿಸಬಾರದು. ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು ಹಾಗೂ ಸಂಚಾರಿ ನಿಯಮಗಳನ್ನು ಪಾಲಿಸಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಡಾ. ವಿನೋದ ಮೇತ್ರಿ ಮಾತನಾಡಿ ಅಕ್ಷರ ವಿದ್ಯಾ ವಿಹಾರ ಶಿಕ್ಷಣ ಸಂಸ್ಥೆಯು ಅತ್ಯುತ್ತಮ ಬೋಧನಾ ಕೌಶಲ್ಯಗಳನ್ನು ಹೊಂದಿದೆ. ಎಲ್ಲರೂ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಪತ್ರಕರ್ತ ಜಯರಾಮಶೆಟ್ಟಿ, ಶಿಕ್ಷಕ ಎಂ. ಕೆ. ಕುಲಗೋಡ ಮಾತನಾಡಿ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮತ್ತು ದೃಢ ಸಂಕಲ್ಪವಿದ್ದರೆ ಜಗತ್ತನ್ನೇ ಗೆಲ್ಲುವ ಸಾಮರ್ಥ್ಯ ಹೊಂದುವರು ಎಂದರು.

ಕಾಲೇಜಿನ ಪ್ರಾಚಾರ್ಯ ಪ್ರವೀಣ ಕುಲಗೋಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಧರೆಪ್ಪ ಬ್ಯಾಕೋಡ, ಪ್ರಕಾಶ ಸರ್, ಎಸ್. ಕೆ. ಗಿಂಡೆ, ದುಂಡಪ್ಪ ಪಟ್ಟಣಶೆಟ್ಟಿ ಭಾಗವಹಿಸಿದ್ದರು. ವಾರ್ಷಿಕ ಸಂಯೋಜಕರಾದ ಅಮರನಾಥ ರಾವಳ ಹಾಗೂ ಸಿಬ್ಬಂದಿ ಹಾಜರಿದ್ದರು.

ಸುಮಲತಾ ಕಲ್ಲೂರ ಸ್ವಾಗತಿಸಿದರು. ಅಂಕಿತಾ ರಾಠೋಡ ಸೊಗಸಾಗಿ ನಿರೂಪಿಸಿದರು. ಕಾಶವ್ವ ಬ್ಯಾಳಿ ವಂದಿಸಿದರು.

## ಆಯ ತಪ್ಪಿದರೆ ಪ್ರಾಣಕ್ಕೆ ಕುತ್ತು; ಕೃಷ್ಣಾನದಿ ತೀರದಲ್ಲಿ ಯುವಕರ ಸೆಲ್ಫಿ ಹುಚ್ಚಾಟ

**ರಬಕವಿ :** ಸಮೀಪದ ಕೃಷ್ಣಾ ನದಿ ತುಂಬಿ ಹರಿಯುತ್ತಿದ್ದು, ರಬಕವಿ-ಮಹಿಷವಾಡಗಿ ಬ್ರಿಜ್ ಬಳಿ ಜನರು ಸೆಲ್ಫಿ ತೆಗೆಯಲು ಮತ್ತು ಸಣ್ಣ ಮೀನುಗಾರರು ಮೀನು ಹಿಡಿಯುತ್ತಿದ್ದು, ನದಿ ರಭಸವಾಗಿ ಹರಿಯುತ್ತಿರುವುದರಿಂದ ಅಪಾಯ ಉಂಟಾಗುವ ಸಂಭವ ಜಾಸ್ತಿಯಾಗಿದ್ದು ಈ ಕುರಿತು ಅಧಿಕಾರಿಗಳು ಮುಂಜಾಗ್ರತಾ ಕ್ರಮ ತೆಗೆದುಕೊಳ್ಳುವುದು ಅವಶ್ಯ.

ಜೀವ ಹೋದರೆ ಮರಳಿ ಬಾರದು. ಜೀವ ಅಮೂಲ್ಯ. ಅದರೊಂದಿಗೆ ಹುಡುಗಾಟ ಬೇಡ. ಆದ್ದರಿಂದ ಯುವಕರು ಜಾಗೃತರಾಗಿರಬೇಕು.

ಈಗ ಪ್ರವಾಹ ಭೀತಿಯಲ್ಲಿ ಕೃಷ್ಣಾ ನದಿ ತೀರದಲ್ಲಿಯ ಜನರು ಭಯದಲ್ಲಿದ್ದಾರೆ. ನದಿ ತನ್ನೆರಡು ಒಡಲು ತುಂಬಿ ರಭಸದಿಂದ



ಹರಿಯುತ್ತಿದೆ.

ಆದರೆ ಇಲ್ಲಿ ಅನೇಕ ಯುಕವರು ತೀರ ನದಿ ತಟದಲ್ಲಿ ಮೀನು ಹಿಡಿಯುವುದು, ಸೇಲ್ಫಿ ಕ್ಲಿಕ್ ಮಾಡುತ್ತಿರುವುದು ಸರಿಯಾದ ಮಾರ್ಗವಲ್ಲ ಎಂದು ಅನೇಕ ಪ್ರಜ್ಞಾವಂತರ ಅಭಿಪ್ರಾಯವಾಗಿದೆ.

ನದಿ ತೀರದಲ್ಲಿ ಕಲ್ಲುಗಳಿಂದ ಬದು ನಿರ್ಮಾಣ ಮಾಡಲಾಗಿದೆ. ಜೋರಾಗಿ ಹರಿದು ಬರುವ ನೀರಿನ ರಬಸಕ್ಕೆ ಕೊರೆತ ಉಂಟಾಗಲು ಪ್ರಾರಂಭವಾಗಿದೆ. ಒಂದೇ ಭಾರಿಗೆ ಕೊರೆದು ಉರುಳಿ ಬಿದ್ದರೆ ಅಲ್ಲಿನಿಂತ ಎಲ್ಲ ಯುವಕರು ನೀರು ಪಾಲಾಗಿ ಹೋಗಿ ಜೀವಹಾನಿಯಾಗುವ ಸಾಧ್ಯತೆ ಇದೆ. ಆದಕಾರಣ ಯುವಕರು ಸೆಲ್ಫಿಗೆ ಮಾರುಹೋಗಿ ಜೀವ ಕಳೆದುಕೊಳ್ಳಬೇಡಿ ಎಂಬುದು ಪ್ರಜ್ಞಾವಂತರ ಮಾನವೀಯ ಕಳಕಳಿ.

ಬುಧವಾರ ಹಿಪ್ಪರಗಿ ಸೇತುವೆಗೆ 1,07,980 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, 1,07,230 ಕ್ಯೂಸೆಕ್ ನಷ್ಟು ಹೊರ ಬಿಡಲಾಗುತ್ತಿದೆ ಎಂದು ಜಮಖಂಡಿಯ ಕಂದಾಯ ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ ತಿಳಿಸಿದ್ದಾರೆ.

ಮೇಲ್ಗಡೆ ಭಾಗದಲ್ಲಿ ಮಳೆಯ ರಭಸ ಹೆಚ್ಚಾಗಿರುವುದರಿಂದ ಇನ್ನೂ ಹೆಚ್ಚಿನ ಪ್ರಮಾಣದ ನೀರು ಹರಿದು ಬರುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

## ಶಿಸ್ತು, ಸನ್ನಡತೆ ವಿದ್ಯಾರ್ಥಿಗಳ ನಿಜವಾದ ಸ್ವತ್ತು: ಸಿದ್ಧೇಶ್ವರಾನಂದ ಸ್ವಾಮೀಜಿ



**ಮಹಾಲಿಂಗಪುರ :** ಜ್ಞಾನಕ್ಕಿಂತ ಶಿಸ್ತು ಸನ್ನಡತೆಯೇ ವಿದ್ಯಾರ್ಥಿಗಳ ನಿಜವಾದ ಸ್ವತ್ತು ಎಂದು ಬೀದರದ ಚಟ್ನಳ್ಳಿ ಅಲ್ಲಮಪ್ರಭುದೇವರಮಠದ ಸಿದ್ಧೇಶ್ವರಾನಂದ ಸ್ವಾಮೀಜಿ ಹೇಳಿದರು.

ಸ್ಥಳೀಯ ಕೆಎಲ್ಇ ಸಂಸ್ಥೆಯ ಎಸ್ಸಿಪಿ ಪದವಿ ಪೂರ್ವ ಕಾಲೇಜು ಮತ್ತು ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ನೈತಿಕ ಮೌಲ್ಯಗಳ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ವಿಧೇಯತೆ, ತನ್ಮಯತೆ, ಏಕಾಗ್ರತೆಯಿಂದ ಜ್ಞಾನ ಗಳಿಸಿ ಸಮಾಜದ ಋಣ ತೀರಿಸುವ ಮಹತ್ಕಾರ್ಯದಿಂದ ದೇಶದ ಆಸ್ತಿಯಾಗಬೇಕು. ಕಳಬೇಡ, ಕೊಲಬೇಡ..

ಹಾಸಿಗೆಯ ನುಡಿಯಲು ಬೇಡ....ಎಂದು ಬಸವಣ್ಣನವರು ಹೇಳಿದ ಸಪ್ತ ಸೂತ್ರಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಂಡು ಆದರ್ಶವಂತರಾಗಬೇಕು ಎಂದರು.

ಮಧ್ಯದಲ್ಲಿ ನಡೆದ ಸಂವಾದದಲ್ಲಿ ಪೂಜ್ಯ ಶ್ರೀಗಳು ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರ ನೀಡಿದ ಹತ್ತಾರು ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಕಾಣಿಕೆಯಾಗಿ ನೀಡಿದರು. ತಾವು ಕೂಡ ಹುಬ್ಬಳ್ಳಿಯ ಕೆಎಲ್ಇ ಕಾಲೇಜಿನಲ್ಲಿ ಬಿಕಾಂ ಪದವಿ ಪಡೆದು ಅಕ್ಷರ ಋಣ ತೀರಿಸಲು ಪ್ರತಿ ಕಾಲೇಜಿಗೆ ತೆರಳಿ ವಿದ್ಯಾರ್ಥಿಗಳಿಗೆ ನೈತಿಕ ಮೌಲ್ಯಗಳ ಕುರಿತು ಬೋಧನೆ ಮಾಡುತ್ತಿರುವುದಾಗಿ ಹೇಳಿದರು.

ಅನುಭಾವದಿಂದ ಇಪ್ಪತ್ತು ಪುಸ್ತಕ ಬರೆದಿರುವ ಪೂಜ್ಯರು ಹತ್ತಾರು ಪುಸ್ತಕಗಳನ್ನು ಕಾಲೇಜಿನ ಗ್ರಂಥಾಲಯಕ್ಕೆ ನೀಡಿದರು. ನಂತರ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಪೂಜ್ಯರಿಗೆ ಗೌರವ ಕಾಣಿಕೆ ನೀಡಿ ಸನ್ಮಾನಿಸಿದರು. ಪ್ರಾಚಾರ್ಯ ಎಲ್. ಬಿ. ತುಪ್ಪದ ಅಧ್ಯಕ್ಷತೆ ವಹಿಸಿದ್ದರು. ಉಪಪ್ರಾಂಶುಪಾಲ ಬಿ.ಎನ್.ಅರಕೇರಿ, ಉಪನ್ಯಾಸಕ ಬಿ.ಬಿ.ಯಲ್ಲಟ್ಟಿ, ಎಸ್.ವಿ.ಸಿದ್ನಾಳ, ಎಸ್.ಎಚ್.ಮೆಳವಂಕಿ, ಬಿ.ಎಂ.ಸಿದ್ನಾಳ, ಆರ್.ಎಸ್.ಕಲ್ಲೋಳಿ, ಮಹಾಲಿಂಗ ಉಪ್ಪಾರ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಸಿದ್ದು ಕೊಣ್ಣೂರ ನೇಮಕಕ್ಕೆ ಒತ್ತಾಯ



**ರಬಕವಿ-ಬನಹಟ್ಟಿ :** ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಸ್ಥಾನವನ್ನು ತೇರದಾಳ ವಿಧಾನಸಭಾ ಕ್ಷೇತ್ರದ ಕಳೆದ ಸಲದ ಸೋತ ಅಭ್ಯರ್ಥಿ ಸಿದ್ದು ಕೊಣ್ಣೂರರಿಗೆ ನೀಡಬೇಕೆಂದು ಕ್ಷೇತ್ರದ ಕಾಂಗ್ರೆಸ್ ಪಕ್ಷದ ಬಹಳಷ್ಟು ಕಾರ್ಯಕರ್ತರು ಒಕ್ಕೊರಲಿನಿಂದ ಒತ್ತಾಯ ಮಾಡಿದರು.

ಬುಧವಾರ ಬನಹಟ್ಟಿಯ ವಿಶ್ರಾಂತಿ ಧಾಮದಲ್ಲಿ ಸಭೆ ನಡೆಸಿ ಮಾತನಾಡಿದ ಕೆಪಿಸಿಸಿ ಸದಸ್ಯ ಬಸವರಾಜ ಕೊಕಟನೂರ, ತೇರದಾಳ ಭಾಗದಿಂದ ಇಲ್ಲಿಯವರೆಗೆ ಒಬ್ಬರೂ ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಸ್ಥಾನ ಅಲಂಕರಿಸಿಲ್ಲ. ಜಿಲ್ಲೆಯಲ್ಲಿಯೇ ಅತ್ಯಂತ ಪ್ರಬಲ ಹಾಗು ಬಲಿಷ್ಠವಾಗಿ ಕ್ಷೇತ್ರಾದ್ಯಂತ ಪಕ್ಷ ಸಂಘಟನೆಯ ಜೊತೆಗೆ ಯುವಕರ ಪಡೆ ಕಟ್ಟುವಲ್ಲಿ ಸಿದ್ದು ಕೊಣ್ಣೂರ ಯಶಸ್ವಿಯಾಗುತ್ತಿದ್ದು, ಕ್ಷೇತ್ರದಲ್ಲಿ ವಿಶೇಷ ಕಾರ್ಯಕ್ರಮಗಳೊಂದಿಗೆ ಜನಾನುರಾಗಿ ಸೇವೆಸಲ್ಲಿಸುವ ಇವರ ಕಾಯ9ವೈಖರಿ ಮೆಚ್ಚುವಂತದ್ದು ಎಂದರು.

ಈಬಾರಿತೇರದಾಳಕ್ಷೇತ್ರದಿಂದಪಕ್ಷಕ್ಕೆಬಲತುಂಬುವಲ್ಲಿ ಶ್ರಮಿಸಿದ್ದಾರೆ. ಕಾರಣ ಈ ಸಲ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಕೊಣ್ಣೂರರಿಗೆ ಅವಕಾಶ ಕಲ್ಪಿಸಬೇಕು. ಮುಖಂಡರ ಹಾಗು ಕಾರ್ಯಕರ್ತರ ಮೆಚ್ಚುಗೆಗೆ ಪಾತ್ರವಾಗಿರುವ ಸಿದ್ದು ಕೊಣ್ಣೂರರಿಗೆ ಸ್ಥಾನ ನೀಡುವಂತೆ ವರಿಷ್ಠರನ್ನು ಜಿಲ್ಲಾ ಮುಖಂಡರು ಒತ್ತಾಯಿಸಬೇಕೆಂದು ಕೊಕಟನೂರ ತಿಳಿಸಿದರು.

ಕ್ಷೇತ್ರದ ನಗರ ಬ್ಲಾಕ್ ಅಧ್ಯಕ್ಷ ಮಲ್ಲಪ್ಪ ಸಿಂಗಾಡಿ ಮಾತನಾಡಿ, ಸಿದ್ದು ಕೊಣ್ಣೂರ ಕಳೆದ ಬಾರಿ ಚುನಾವಣೆಯಲ್ಲಿ ಪರಾಭವಗೊಂಡಿದ್ದರೂ ಕೂಡ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಮನೆ ಮನೆಗೆ ತಲುಪಿಸುವ ಕಾರ್ಯದ ಜೊತೆಗೆ ಕಾರ್ಯಕರ್ತರ ವಿಶ್ವಾಸದೊಂದಿಗೆ ನಿರಂತರವಾಗಿ ಜನಸಾಮಾನ್ಯರ ಸೇವೆಯಲ್ಲಿ ತೊಡಗಿರುವುದು ವಿಶೇಷ. ಜಿಲ್ಲಾಧ್ಯಕ್ಷ ಸ್ಥಾನತುಂಬುವಲ್ಲಿಎಲ್ಲಅರ್ಹತೆಯನ್ನುಹೊಂದಿರುವ ಇವರಿಗೆ ಯಾವದೇ ನಿರ್ಬಂಧ ಹೇರದೆ ಸ್ಥಾನ ಒದಗಿಸಿದ್ದಲ್ಲಿ ಯುವಕರಿಗೆ ಸ್ಫೂರ್ತಿಯ ಜೊತೆಗೆ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಮತ್ತಷ್ಟು ಬಲಿಷ್ಠವಾಗುವಲ್ಲಿ ಕಾರಣವಾಗಲಿದೆ ಎಂದರು.

ಪ್ರಾಧಿಕಾರ ಅಧ್ಯಕ್ಷ ವೆಂಕನಗೌಡ ಪಾಟೀಲ, ಸಂಜು ಜೋತಾವರ, ಶಂಕರ ಕೆಸರಗೊಪ್ಪ, ಹಾರೂನ್ ಬೇವೂರ, ಸಂಗಮೇಶ ಮಡಿವಾಳ, ಮಲ್ಲು ಹಿಪ್ಪರಗಿ, ಜಕ್ಕಪ್ಪ ಪಾಟೀಲ, ಇರ್ಷಾದ್ ಮೋಮಿನ್, ಮುತ್ತಪ್ಪ, ಹಫೀಜ್, ದಢೂತಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

## ಕೆಎಲ್ಇ ಪದವಿ ಕಾಲೇಜಿನ ವಿಜ್ಞಾನ ವಿಭಾಗಕ್ಕೆ ಶೇ. 100 ರಷ್ಟು ಫಲಿತಾಂಶ



**ಮಹಾಲಿಂಗಪುರ:** ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ನಡೆಸಿದ 2024-25 ನೇ ಸಾಲಿನ ಪದವಿ ಪರೀಕ್ಷೆಗಳಲ್ಲಿ ಪಟ್ಟಣದ ಕೆಎಲ್ಇ ಪದವಿ ಕಾಲೇಜಿನ ವಿಜ್ಞಾನ ವಿಭಾಗದ ಆರನೇ ಸೆಮಿಸ್ಟರ್ನ ಎಲ್ಲ ಇಪ್ಪತ್ತು ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ (ಡಿಸ್ಟಿಂಕ್ಷನ್) ಉತ್ತೀರ್ಣರಾಗುವ ಮೂಲಕ ವಿಭಾಗದ ಫಲಿತಾಂಶ ಶೇ. 100 ರಷ್ಟಾಗಿದೆ.

ವಿದ್ಯಾರ್ಥಿಗಳಾದ ಐಶ್ವರ್ಯ ಕುಳಲಿ, ಅಶ್ವಿನಿ ಭದ್ರಶೆಟ್ಟಿ ಹಾಗೂ ನಜರಿನ್ ಯಾದವಾಡ (9.46 ಎಸ್ಜಿಪಿಎ ಅಂಕ) ಪ್ರಥಮ, ರೂಪಾ ಹಂದಿಗುಂದ (9.03 ಎಸ್ಜಿಪಿಎ ಅಂಕ) ದ್ವಿತೀಯ, ಮೇಘಾ ಹಟ್ಟಿ ಮತ್ತು ಪ್ರಿಯಂಕಾ ಲೋಕುರಿ (9.00 ಎಸ್ಜಿಪಿಎ ಅಂಕ) ತೃತೀಯ, ಭೌತಶಾಸ್ತ್ರ ವಿಷಯದಲ್ಲಿ ರೂಪಾ ಹಂದಿಗುಂದ ನೂರಕ್ಕೆ ನೂರು ಅಂಕ ಪಡೆದಿದ್ದಾಳೆ ಎಂದು ಪ್ರಾಚಾರ್ಯ ಡಾ. ಕೆ. ಎಂ. ಅವರಾದಿ ತಿಳಿಸಿದ್ದಾರೆ.

## ಕಾಣೆಯಾಗಿದ್ದಾನೆ



**ಬನಹಟ್ಟಿ :** ಇಲ್ಲಿಯ ಅಶೋಕ ಕಾಲನಿಯ ನಿವಾಸಿ ಬುರಾನ ಶಮ್ಮು ಮೋಮಿನ್ ಎಂಬ 25 ವರ್ಷದ ವ್ಯಕ್ತಿ ಕಾಣೆಯಾಗಿದ್ದಾನೆ. ಕಳೆದ ಜುಲೈ ಎರಡರಂದು ರಂದು ಸಂಜೆ ಆರು ಗಂಟೆಗೆ ಮಸೀದಿಗೆ ಹೋಗಿ ನಮಾಜ್ ಮಾಡಿ ಬರುವದಾಗಿ ತಿಳಿಸಿ ಹೋದವನು ಮರಳಿ ಮನೆಗೆ ಬಾರದೆ ಕಾಣೆಯಾಗಿದ್ದಾನೆಂದು ಆತನ ಪತ್ನಿ ನಮೀತಾ ಮೋಮಿನ್ ಫಿರ್ಯಾಧಿಯಲ್ಲಿ ತಿಳಿಸಿದ್ದಾರೆ. ಕಾಣೆಯಾದ ವ್ಯಕ್ತಿ ಬುರಾನ್ ಜಾತಿ ಮುಸ್ಲಿಂ, ಗೌಂಡಿ ಕೆಲಸದಲ್ಲಿ ತೊಡಗಿದ್ದನು. 5.4 ಅಡಿ ಎತ್ತರ, ಉದ್ದ ಮುಖ, ಉದ್ದ ಮೂಗು, ಸಾದಾಗೆಂಪು ಮೈಬಣ್ಣವಿದ್ದು, ಮನೆ ಬಿಟ್ಟು ಹೋಗುವಾಗ ಗ್ರೇ ಕಲರ್ ಪ್ಯಾಂಟ್ ಶರ್ಟ್ ಧರಿಸಿದ್ದಾನೆ. ಕನ್ನಡ, ಉರ್ದು ಭಾಷೆ ಮಾತನಾಡುವ ಈತ ದೊರೆತಲ್ಲಿ ಬನಹಟ್ಟಿ ಪೊಲೀಸ್ ಠಾಣೆ-08353-230292 ನಂಬರನ್ನು ಸಂಪರ್ಕಿಸಬಹುದು.

# ಆತ್ಮ ನಿರ್ಭರ ಭಾರತ ಅಭಿಯಾನ: ಅರಿವು ಕಾರ್ಯಾಗಾರ

## ಯುವ ಉದ್ಯಮಿ, ರೈತರಿಗೆ ವರದಾನವಾಗಲಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರದ ಪಿಎಂಎಫ್ಎಂಇ ಯೋಜನೆಯ ಸದುಪಯೋಗವಾಗಬೇಕು; ವ್ಯವಸ್ಥಾಪಕ ನಿರ್ದೇಶಕ ಸಿ.ಎನ್ ಶಿವಪ್ರಕಾಶ

**ಧಾರವಾಡ :** ನಮ್ಮ ಹಳ್ಳಿಗಳಲ್ಲಿ, ನಮ್ಮ ಹೊಲಗಳಲ್ಲಿ ಬೆಳೆದ ಉತ್ಪನ್ನಗಳಿಗೆ ಸಕಾಲಕ್ಕೆ ಸರಿಯಾದ ಬೆಲೆ ಸಿಗದೇ, ಎಷ್ಟೋ ರೈತರು ಮತ್ತು ಸಣ್ಣ ಉದ್ದಿಮೆದಾರರು ಕಷ್ಟಪಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಹಣ್ಣು, ತರಕಾರಿ, ಧಾನ್ಯಗಳು ಕಾಲಕ್ಕೆ ಸರಿಯಾಗಿ ಮಾರಾಟವಾಗದೆ ವ್ಯರ್ಥವಾಗುತ್ತವೆ. ಈ ಎಲ್ಲಾ ಸಮಸ್ಯೆಗಳಿಗೆ ಒಂದು ಉತ್ತಮ ಪರಿಹಾರವೇ ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆಯ ಯೋಜನೆಯಾಗಿದೆ. ಇದನ್ನು ಸದುಪಯೋಗ ಪಡೆದುಕೊಂಡು ರೈತರು, ರೈತ ಗುಂಪುಗಳು, ಇತರರು ಉದ್ಯಮಿದಾರರಾಗಿ, ಯುವ ಜನತೆಗೆ ಸ್ಫೂರ್ತಿದಾಯಕರಾಗಬೇಕೆಂದು ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮದ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್ ಶಿವಪ್ರಕಾಶ ಅವರು ಹೇಳಿದರು.

ಅವರು ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಕೃಷಿ ಇಲಾಖೆ ಸಹಯೋಗದಲ್ಲಿ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮವು ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ದಗೊಳಿಸುವ (ಪಿಎಂಎಫ್ಎಂಇ) ಯೋಜನೆಯ ಕುರಿತು ಜಿಲ್ಲಾ ಮಟ್ಟದಲ್ಲಿ ವಿವಿಧ ಪಾಲುದಾರರಿಗೆ ಆಯೋಜಿಸಿದ್ದ ಅರಿವು ಮೂಡಿಸುವ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು.

ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ದಗೊಳಿಸುವ ಯೋಜನೆಯು ಕೇವಲ ಸರಕಾರಿ ಸೌಲಭ್ಯವಲ್ಲ; ಇದು ನಮ್ಮ ಗ್ರಾಮೀಣ ಆರ್ಥಿಕತೆಗೆ ಚೈತನ್ಯ ನೀಡುವ, ರೈತರನ್ನು ಹಾಗೂ ಸಣ್ಣ ಉದ್ಯಮಿಗಳನ್ನು ಸ್ವಾವಲಂಬಿಗಳನ್ನಾಗಿ ಮಾಡುವ ಒಂದು ಸುವರ್ಣಾವಕಾಶವಾಗಿದೆ. ಈ ಯೋಜನೆಯ ಮೂಲಕ ಲಾಭಗಳನ್ನು ಪಡೆದುಕೊಂಡು ಸ್ವಾಲಂಬಿ ಬದುಕು ರೂಪಿಸಿಕೊಳ್ಳಲು ಇದು ಒಂದು ಮಹತ್ವದ ಯೋಜನೆಯಾಗಿದೆ ಎಂದು ತಿಳಿಸಿದರು.

ಈ ಯೋಜನೆಯಲ್ಲಿ ಆಹಾರ ಸಂಸ್ಕರಣಾ ಉದ್ದಿಮೆಗಳು ಸಿರಿಧಾನ್ಯಗಳ ಮತ್ತು ಇತರೆ ಧಾನ್ಯಗಳ ಸಂಸ್ಕರಣೆಗಳಾದ ಬೆಲ್ಲ, ನಿಂಬೆ ಉತ್ಪನ್ನಗಳು, ಬೇಕರಿ ಉತ್ಪನ್ನಗಳು, ಕೋಲ್ಡ್ ಪ್ರೆಸ್ಡ್ ಆಯಿಲ್, ಮೆಣಸಿನ ಪುಡಿ ಘಟಕಗಳು, ಅನಾನಸ್ ಸಂಸ್ಕರಣಾ ಘಟಕಗಳು, ಮಸಾಲಾ ಉತ್ಪನ್ನಗಳ ಘಟಕಗಳು, ತೆಂಗಿನ




ಉತ್ಪನ್ನಗಳು, ಕುಕ್ಕುಟ ಉತ್ಪನ್ನಗಳು, ಸಾಗರ ಉತ್ಪನ್ನಗಳ ಹಾಗೂ ವಿವಿಧ ಹಣ್ಣು ಮತ್ತು ತರಕಾರಿಗಳ ಉತ್ಪನ್ನಗಳು ಸೇರಿದಂತೆ ವಿವಿಧ ರೀತಿಯ ಆಹಾರ ಸಂಸ್ಕರಣಾ ಘಟಕಗಳನ್ನು ಆರಂಭಿಸಲು ಸರ್ಕಾರದಿಂದ ಸಹಾಯಧನದ ಮೂಲಕ ನೆರವು ನೀಡಲಾಗುತ್ತಿದೆ ಎಂದು ಅವರು ತಿಳಿಸಿದರು.

ಪಿಎಂಎಫ್ಎಂಇ ಯೋಜನೆಯಲ್ಲಿ ಪ್ರತಿ ಯೋಜನಾ ಘಟಕಕ್ಕೆ ಕೇಂದ್ರ ಸರ್ಕಾರವು ಶೇ.35 ರಷ್ಟು ಮತ್ತು ರಾಜ್ಯ ಸರ್ಕಾರವು ಶೇ. 15 ರಷ್ಟು ಸೇರಿ ಒಟ್ಟು ಶೇ. 50 ರಷ್ಟು ಸಹಾಯಧನವನ್ನು ಅಥವಾ ಗರಿಷ್ಠ ರೂ. 15 ಲಕ್ಷ ಸಹಾಯಧನ ನೀಡಲಾಗುತ್ತದೆ. ಈ ಯೋಜನೆಯು 2020-21 ರಿಂದ 2024-25 (5 ವರ್ಷಗಳು) ರವರೆಗೆ ಜಾರಿಯಲ್ಲಿತ್ತು. ಈಗ ಪ್ರಸ್ತುತ ಮಾರ್ಚ್ 2026 ವರೆಗೆ ಯೋಜನೆಯ ಅವಧಿ ವಿಸ್ತರಿಸಲಾಗಿದೆ. ಇದರ ಸದುಪಯೋಗವನ್ನು ಫಲಾನುಭವಿಗಳು ಪಡೆದುಕೊಳ್ಳಬೇಕೆಂದು ಹೇಳಿದರು.

ಕೇಂದ್ರ ಸರ್ಕಾರದಿಂದ 10 ಸಾವಿರ ಕೋಟಿ ರೂಪಾಯಿಗಳ ಅನುದಾನವನ್ನು ರಾಷ್ಟ್ರವ್ಯಾಪಿಯಾಗಿ ವಿವಿಧ ರಾಜ್ಯಗಳಿಗೆ ಕಳೆದ 5 ವರ್ಷಗಳಲ್ಲಿ ಒದಗಿಸಲಾಗಿದೆ. ಮತ್ತು ಕರ್ನಾಟಕ ರಾಜ್ಯಕ್ಕೆ ರೂ. 493.65 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಈಗಾಗಲೇ 2 ಲಕ್ಷ ಘಟಕಗಳು ಈ ಯೋಜನೆಯಲ್ಲಿ ಭಾಗಿಯಾಗಿವೆ ಎಂದು ಅವರು ತಿಳಿಸಿದರು.

ಧಾರವಾಡ ಜಿಲ್ಲೆಯಲ್ಲಿ ಯೋಜನೆ ಆರಂಭವಾದಾಗಿನಿಂದ ಇಲ್ಲಿಯವರೆಗೆ ಬ್ಯಾಂಕ್ ಸಾಲಕ್ಕಾಗಿ 600 ಅರ್ಜಿಗಳು ಬಂದಿದ್ದು, ಜಿಲ್ಲಾ ಮಟ್ಟದ ಸಮಿತಿಯಲ್ಲಿ 592ನ್ನು ಪರಿಶೀಲನೆ ಮಾಡಲಾಗಿದೆ. 564 ಪ್ರಸ್ತಾವನೆಗಳನ್ನು ವಿವಿಧ ಬ್ಯಾಂಕುಗಳಿಗೆ ಕಳಿಸಿದ್ದು, 400 ಫಲಾನುಭವಿಗಳಿಗೆ ಸಾಲ ಮಂಜೂರಾಗಿದೆ. 53 ಅರ್ಜಿಗಳು ವಿವಿಧ ಬ್ಯಾಂಕುಗಳಲ್ಲಿ ಪರಿಶೀಲನೆ ಹಂತದಲ್ಲಿವೆ. ರೂ 30 ಕೋಟಿ ಯೋಜನಾ ವೆಚ್ಚದ ಆಹಾರ ಸಂಸ್ಕರಣಾ ಘಟಕಗಳಿಗೆ ಇದುವರೆಗೆ 7.5 ಕೋಟಿ ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ ಎಂದು ವ್ಯವಸ್ಥಾಪಕ ನಿರ್ದೇಶಕ ಸಿ.ಎನ್ ಶಿವಪ್ರಕಾಶ ಅವರು ಹೇಳಿದರು.

ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆಯ ಕುರಿತು ಜಿಲ್ಲೆಯಲ್ಲಿ ಆಸಕ್ತರಿಗೆ ಮಾಹಿತಿ ನೀಡಿ, ಬ್ಯಾಂಕ್ ಲಿಂಕ್ ಮಾಡಿಕೊಡಲು 15 ಜನ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳನ್ನು ನೇಮಿಸಲಾಗಿದೆ. ಇವರು ಆಸಕ್ತರಿಗೆ ಅಗತ್ಯ ಮಾಹಿತಿ, ದಾಖಲೆಗಳ ಸಂಗ್ರಹಕ್ಕೆ ಸಹಾಯ ಮತ್ತು ಬ್ಯಾಂಕ್ ಲಿಂಕ್ ಮಾಡಿ, ಸಾಲ ಸೌಲಭ್ಯ ಮತ್ತು ಸಹಾಯಧನ ಲಭಿಸುವಂತೆ ನೆರವಾಗುತ್ತಾರೆ. ಇವರ ನೆರವು ಆಸಕ್ತರು ಪಡೆಯಬಹುದೆಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್ ಶಿವಪ್ರಕಾಶ ಅವರು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವರ ಸಂದೇಶ: ಸಭೆಯ ಆರಂಭದಲ್ಲಿ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರಿಗೆ ಕಳುಹಿಸಿದ್ದ ಸಂದೇಶವನ್ನು ಜಂಟಿ ಕೃಷಿ ನಿರ್ದೇಶಕ ಮಂಜುನಾಥ ಅಂತರವಳ್ಳಿ ಅವರು ಪ್ರಸ್ತಾಪಿಸಿ, ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆಯ (ಪಿ.ಎಂ. ಎಫ್.ಎಂ) ಯೋಜನೆಯು ಜನ ಕಲ್ಯಾಣದ ಕಾರ್ಯಕ್ರಮವಾಗಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಹತ್ವಾಕಾಂಕ್ಷೆಯ ಯೋಜನೆ ಆಗಿದೆ.

ಕಾರ್ಯಕ್ರಮವು ನಿರುದ್ಯೋಗ ನಿವಾರಣೆ ಜೊತೆಗೆ, ಸ್ಥಾನಿಕ ಅಥವಾ ಪ್ರಾದೇಶಿಕ ವಿಶೇಷತೆಗಳಿರುವ ಆಹಾರವನ್ನು ಜಗತ್ತಿಗೆ ಪರಿಚಯಿಸುವ ತನ್ಮೂಲಕ ರಾಜ್ಯದ ಆಹಾರ ಸಂಪ್ರದಾಯವನ್ನು ಎತ್ತಿ ಹಿಡಿಯುವ ಉತ್ತಮ ಕಾರ್ಯಕ್ರಮವಾಗಿದೆ. ಸ್ವಾವಲಂಬನೆ ಮತ್ತು ಆರ್ಥಿಕ ಸದೃಢತೆ ಸಾಧಿಸಲು ಪೂರಕವಾದ ಸರಕಾರದ ಈ ಯೋಜನೆಯನ್ನು ಉದ್ಯೋಗಾಕಾಂಕ್ಷಿಗಳು, ಉದ್ದಿಮೆ ಸ್ಥಾಪಿಸುವ ಮತ್ತು ಬಲಪಡಿಸುವ ಮತ್ತು ಉದ್ಯೋಗ ನೀಡುವ ಹಂಬಲವಿರುವ ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳಬೇಕೆಂದು ತಿಳಿಸಿದ್ದಾರೆ ಎಂದು ಅವರು ಓದಿ ಹೇಳಿದರು.

ಕಾರ್ಯಕ್ರಮದಲ್ಲಿ ಜಂಟಿ ಕೃಷಿ ನಿರ್ದೇಶಕ ಶಿವಕುಮಾರ ಎಚ್.ಕೆ. ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಯೋಜನೆಯ ಬಗ್ಗೆ ವಿವರಿಸಿದರು.

ವೇದಿಕೆಯಲ್ಲಿ ಬೆಂಗಳೂರ ವಾಣಿಜ್ಯ ತೆರಿಗೆ ಇಲಾಖೆ ಜಂಟಿ ನಿರ್ದೇಶಕ ನಾರಾಯಣಸ್ವಾಮಿ, ಧಾರವಾಡ ಲೀಡ್ ಬ್ಯಾಂಕ್‌ನ ಮ್ಯಾನೇಜರ್ ಬಸವರಾಜ ಗಡದವರ, ನಬಾರ್ಡ್ ಜಿಲ್ಲಾ ಅಭಿವೃದ್ಧಿ ಅಧಿಕಾರಿ ಮಯೂರ ಕಾಂಬಳೆ ಅವರು ಇದ್ದರು. ಕಾರ್ಯಕ್ರಮದಲ್ಲಿ ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕ ಶ್ರೀಪಾದ.ವಿ.ಕುಲಕರ್ಣಿ, ರೇಷ್ಮೆ ಇಲಾಖೆಯ ಉಪನಿರ್ದೇಶಕ ಮಹದೇವ ಎಮ್., ಪಶುಸಂಗೋಪನೆ ಇಲಾಖೆಯ ಉಪ ನಿರ್ದೇಶಕ ಡಾ. ಸದಾಶಿವ ಉಪ್ಪಾರ ಹಾಗೂ ಯೋಜನೆಯ ಫಲಾನುಭವಿಗಳು, ಆಸಕ್ತ ರೈತರು, ರೈತ ಗುಂಪುಗಳ ಪ್ರತಿನಿಧಿಗಳು, ಯುವ ಉದ್ಯಮಿದಾರರು, ಸಾರ್ವಜನಿಕರು ಭಾಗವಹಿಸಿದ್ದರು.

ಪಿಎಂಎಫ್ಎಂಇ ಯೋಜನೆಯ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳು: ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆಯ ಕುರಿತು ಜಿಲ್ಲೆಯಲ್ಲಿ ಹೆಚ್ಚಿನ ಪ್ರಚಾರ ನೀಡಿ, ಆಸಕ್ತರಿಗೆ ನೆರವಾಗಲು ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳನ್ನಾಗಿ ವಿಟ್ಟಲ.ಬಿ.ಸೂರ್ಯವಂಶಿ (9880640615), ಬಸಪ್ಪ ಮುಧೋಳ (8217682195), ಬಂಡೇರಾವ್ ಪಟವಾರಿ (9448487357), ಪ್ರಿಯಾ ಕಿವಡದಾಸನ್ನವರ (9060202709), ಶಿಲ್ಪಾ ಕೊಪ್ಪದ (8088552040), ಗಿರೀಶ್ ಕುಮಾರ್ ಸಿ. ಬುಡರಕಟ್ಟಿಮಠ (9686762766), ಮೋಹನ್.ಬಿ.ಎಸ್. (8553756203), ಅನಿಲ್ ಕುಮಾರ ಮಾಂಜರೆ (6362123820), ಸುರೇಶ ಕಮ್ಮಾರ (7259412877), ರಾಜೇಶ ಅರ್ಜುನರಾವ್ ಶಿಂಧೆ (9620521058), ಸುರೇಶ ಎನ್. ಸಾವಳಗಿ (9663971865), ಗೋಪಾಲಕೃಷ್ಣ ನಾಯಕ್ (9448358676), ಸಂತೋ?ರ್ ಸವದತ್ತಿ (9620902750), ಚಂದ್ರಕಾಂತ ವಿ. ಮರಡಿ (7019970764), ನಾಗಲಿಂಗಯ್ಯ ಹಿರೇಮಠ (7406635606) ಅವರನ್ನು ನೇಮಿಸಲಾಗಿದೆ.

### ಸಮುದಾಯ ವಿಜ್ಞಾನ ಮಹಾವಿದ್ಯಾಲಯ ಪದವೀಧರರ ಸಂಘದ ಉದ್ಘಾಟಣೆ

## ಇಲಾಖೆಯ ನೇಮಕಾತಿಯಲ್ಲಿ ಸಮುದಾಯ ವಿಜ್ಞಾನ ಪದವೀಧರರಿಗೆ ಆದ್ಯತೆ:ಸಚಿವೆ ಲಕ್ಷ್ಮೀ ಹೆಬ್ಬಾಳಕರ್




**ಧಾರವಾಡ :** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮುಂದಿನ ನೇಮಕಾತಿ ಸಂದರ್ಭದಲ್ಲಿ ಸಮುದಾಯ ವಿಜ್ಞಾನ ಪದವೀಧರರಿಗೆ ಕನಿಷ್ಠ ಶೇಕಡಾ 20 ರಿಂದ 25 ರಷ್ಟು ಮೀಸಲಾತಿ ನೀಡಲು ಕ್ರಮ ಕೈಗೊಳ್ಳುವುದಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಭರವಸೆ ನೀಡಿದರು.

ಗ್ರಾಮೀಣ ಗೃಹ ವಿಜ್ಞಾನ ಮಹಾವಿದ್ಯಾಲಯ, ಸಮುದಾಯ ವಿಜ್ಞಾನ ಮಹಾವಿದ್ಯಾಲಯ ಪದವೀಧರರ ಸಂಘವನ್ನು ಉದ್ಘಾಟಿಸಿ ಮಾತನಾಡಿದ ಸಚಿವರು, ನನ್ನ ಇಲಾಖೆಗೆ ಅಗತ್ಯವಾದ ಕೌಶಲ್ಯಗಳನ್ನು ಇಲ್ಲಿ ಕಲಿಸಲಾಗುತ್ತದೆ. ಇಲ್ಲಿ ಪದವಿ ಪಡೆದವರು ನಮ್ಮ ಇಲಾಖೆಗೆ ಹೆಚ್ಚು ಸೂಕ್ತವಾಗುತ್ತಾರೆ. ಈಗಾಗಲೇ ಸಾಕಷ್ಟು ಜನ ಕೆಲಸ ಮಾಡುತ್ತಿದ್ದಾರೆ. ಮುಂದಿನ ನೇಮಕಾತಿ ಸಂದರ್ಭದಲ್ಲಿ ಹೆಚ್ಚು ಆದ್ಯತೆ ನೀಡುವ ಸಂಬಂಧ ಮುಖ್ಯಮಂತ್ರಿಗಳ ಜೊತೆ ಚರ್ಚೆ ನಡೆಸುವೆ, ಜೊತೆಗೆ ಗ್ರಾಮೀಣಾಭಿವೃದ್ಧಿ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರ ಜೊತೆಗೂ ಚರ್ಚೆ ನಡೆಸಿ ಕೂಸಿನ ಮನೆ ಸೇರಿದಂತೆ ವಿವಿಧ ಯೋಜನೆಗಳಲ್ಲಿ ಸಮುದಾಯ ವಿಜ್ಞಾನ ಪದವೀಧರರಿಗೆ ಹೆಚ್ಚು ಅವಕಾಶ ಸಿಗುವಂತೆ ನೋಡಿಕೊಳ್ಳುತ್ತೇನೆ ಎಂದು ಹೇಳಿದರು.

ಈ ಹಿಂದೆ ಮಹಿಳೆಯರು ಅಡುಗೆ ಮನೆಗೆ ಸೀಮಿತರಾಗಿದ್ದರು. ಅಂತಹ ಸಂದರ್ಭದಲ್ಲಿ ಈ ಕಾಲೇಜು ಆರಂಭವಾಗಿದೆ. ಆ ಸಂದರ್ಭದಲ್ಲೂ ಸಾಕಷ್ಟು ಮಹಿಳೆಯರು ಈ ಕಾಲೇಜಿನಲ್ಲಿ ಪದವಿ ಪಡೆದಿದ್ದಾರೆ. ಕಲಿಯುವ ಉತ್ಸಾಹ ಇದ್ದರೆ, ಎಲ್ಲವೂ ಸಾಧ್ಯ ಎನ್ನುವುದನ್ನು ತೋರಿಸಿದ್ದಾರೆ. ಕೆಲವರಿಗೆ ಅವಕಾಶ ಕಡಿಮೆ ಸಿಗಬಹುದು, ಕೆಲವರಿಗೆ ಜಾಸ್ತಿ ಸಿಗಬಹುದು. ಆದರೆ ಅದನ್ನು ಸದುಪಯೋಗ ಪಡಿಸಿಕೊಳ್ಳುವ ಮನೋಭಾವ ಬೇಕು ಎಂದು ಸಚಿವರು ಹೇಳಿದರು.

ಈಗ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಸಮಾಜ ತುಂಬಾ ಬದಲಾಗಿದೆ. ಗಂಡಸರ ಯೋಚನಾ ರೀತಿ ಸಹ ಬದಲಾಗಿದೆ. ಗಂಡು ಹೆಣ್ಣು ಎಂಬ ಬೇಧ ಭಾವ ಉಳಿದಿಲ್ಲ. ಎಲ್ಲರನ್ನೂ ಸಮಾನ ದೃಷ್ಟಿಯಿಂದ ನೋಡಲಾಗುತ್ತಿದೆ. ನಮ್ಮ ದೇಶದ ಸಕಾರಾತ್ಮಕ ಬೆಳವಣಿಗೆಗೆ ಇದು ಕೂಡ ಕಾರಣವಾಗಿದೆ ಎಂದು ಹೇಳಿದರು. ಧಾರವಾಡವನ್ನು ವಿದ್ಯಾಕಾಶಿ ಎಂದು ಕರೆಯುತ್ತೇವೆ. ಇಲ್ಲಿಯ ಕರ್ನಾಟಕ ವಿಶ್ವವಿದ್ಯಾಲಯ ಹಾಗೂ ಕೃಷಿ ವಿಶ್ವವಿದ್ಯಾಲಯಗಳು ನಮ್ಮ ಹೆಮ್ಮೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಬಣ್ಣಿಸಿದರು.

ಈ ವೇಳೆ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ಕುಲಪತಿ ಡಾ.ಪಿ.ಎಲ್.ಪಾಟೀಲ, ವಿದ್ಯಾಧಿಕಾರಿ ಡಾ.ಲತಾ ಪೂಜಾರ್, ನಿವೃತ್ತ ಡೀನ್ ಪುಷ್ಪ ಖಾದಿ, ಪದವೀಧರರ ಸಂಘದ ಅಧ್ಯಕ್ಷರಾದ ಡಾ.ಸರೋಜಿನಿ ಕರಕಣ್ಣವರ್, ಕಾರ್ಯದರ್ಶಿ ಡಾ. ವೀಣಾ ಜಾಧವ, ಜಂಟಿ ಕಾರ್ಯದರ್ಶಿ ಡಾ.ಸಾಧನಾ ಕುಳ್ಳೊಳ್ಳಿ, ಖಜಾಂಚಿ ಡಾ.ಮಂಜುಳಾ ಪಾಟೀಲ, ಸಹ ಖಜಾಂಚಿ ಡಾ.ಉಮಾಕುಲಕರ್ಣಿ, ಸದಸ್ಯರಾದ ಡಾ.ಹೇಮಲತಾ, ಡಾ.ರೇಣುಕಾ ಸಾಳುಂಕೆ, ಡಾ.ಗೀತಾ ಚಿಟಗುಬ್ಬಿ, ಡಾ.ಪ್ರೇಮಾ ಪಾಟೀಲ, ಡಾ.ರಾಜೇಶ್ವರಿ, ಮಾಳವಿಕಾ ಮೊಕಾಶಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

### ತೋಟಗಾರಿಕೆ ಇಲಾಖೆ

## ತಾಳೆ ಬೆಳೆ ವಿಸ್ತರಣೆ ಸಹಾಯಧನಕ್ಕಾಗಿ ರೈತರಿಂದ ಅರ್ಜಿ ಆಹ್ವಾನ

**ಧಾರವಾಡ :** 2025-26 ನೇ ಸಾಲಿನ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ ತಾಳೆಬೆಳೆ ಯೋಜನೆಯಡಿ ತಾಳೆ ಬೆಳೆ ಹೊಸ ತೋಟ ಮಾಡಿಕೊಳ್ಳಲು ಸಹಾಯಧನಕ್ಕಾಗಿ ನವಲಗುಂದ ತಾಲೂಕಿನ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ನವಲಗುಂದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದು ಎಂದು ನವಲಗುಂದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹೋಮಿಯೋಪೆಥಿಕ ವೈದ್ಯರು ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಮುಂದಾಗಲಿ: ಡಾ. ರಿಯಾಜ ಪಾಷಾ




**ಬೆಳಗಾವಿ :** ಇಂದು ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ಹೋಮಿಯೋಪೆಥಿ ಚಿಕಿತ್ಸೆಯ ಪಾತ್ರ ಅತೀ ಮುಖ್ಯವಾಗಿದ್ದು, ಹೋಮಿಯೋಪೆಥಿಕ ವೈದ್ಯರು ಉತ್ತಮ ಮತ್ತು ನಿರೋಗಿ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕೆಂದು ರಾಜೀವ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಮೌಲ್ಯಮಾಪನ ರಜಿಸ್ಟ್ರಾರ ಡಾ. ರಿಯಾಜ ಪಾಷಾ ಅವರು ಇಂದಿಲ್ಲಿ ಹೇಳಿದರು. ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾಲಯದ ಎ.ಪಿ.ಜೆ.,ಅಬ್ದುಲ ಕಲಾಂ ಸಭಾಂಗಣದಲ್ಲಿಂದು ಭರತೇಶ ಹೋಮಿಯೋಪೆಥಿಕ ವೈದ್ಯಕೀಯ ಮಹಾವಿದ್ಯಾಲಯಮತ್ತುಆಸ್ಪತ್ರೆವತಿಯಿಂದ ಹಮ್ಮಿಕೊಳ್ಳಲಾದ "ಏಕಲವ್ಯ" ಎರಡು ದಿನಗಳ ರಾಷ್ಟ್ರೀಯ ಹೋಮಿಯೋಪೆಥಿಕ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಉತ್ತಮ ಆರೋಗ್ಯದಾಯಕ ಸಮಾಜ ನಿರ್ಮಾಣ ಮಾಡುವುದು ಮುಖ್ಯ ಉದ್ದೇಶವಾಗಿರಲಿ ಎಂದರು. ಇಂದು ಮಧುಮೇಹ ರೋಗ ಯಾವ ರೀತಿಯಲ್ಲಿ ಬೆಳೆಯುತ್ತ ಹೋಗಿದೆ. ಅದೇ ಮಾದರಿಯಲ್ಲಿ ಕ್ಯಾನ್ಸರ ರೋಗವೂ ಸಹ ಹರಡುತ್ತಲಿದೆ ಮಧಮೇಹ ಮತ್ತು ಕ್ಯಾನ್ಸರ ರೋಗಗಳ ಮೇಲೆ ಪರಿಣಾಮಕಾರಿ ಓಷಧಿಗಳನ್ನು ಕಂಡು ಹಿಡಿಯಬೇಕಾಗಿದೆ .ಈ ನಿಟ್ಟಿನಲ್ಲಿ ನಿರಂತರವಾಗಿ ಸಂಶೋಧನೆಗಳು ನಡೆಯಬೇಕೆಂದು ಅವರು ಹೇಳಿದರು. ಹೆಚ್ಚಿನ ಸಂಶೋಧನಾ ಕಾರ್ಯಗಳು ಮತ್ತು ಪುರಾವೆ ಆಧಾರಿತ ಅಧ್ಯಯನಗಳನ್ನು ಕೈಗೆತ್ತಿಕೊಳ್ಳುವುದು ಇಂದಿನ ಅಗತ್ಯತೆಯಾಗಿದ್ದು, ಈನಿಟ್ಟಿನಲಿ ಯುವ ವೈದ್ಯರು ಮುಂದಾಗಬೇಕೆಂದು ಹೇಳಿದ ಅವರು ಇಂದು ಆಯೋಜಿಸಲಾದ ಈ ಸಮ್ಮೇಳನ ಅತ್ಯಂತ ಯಶಸ್ವಿಯಾಗಿದ್ದು, ಇದಕ್ಕೆ ಸಂಘಟಕರ ಕಾರ್ಯ ಶ್ಲಾಘನೀಯ ಎಂದು ಅವರು ಹೇಳಿದರು . ಸಮಾರಂಭಕ್ಕೆ ಗೌರವ ಅತಿಥಿಯಾಗಿ ಆಗಮಿಸಿದ ಹೊಮಿಯೋಪೆಥಿ ಕೇಂದ್ರಿಯ ಮಂಡಳಿ ನವ ದೆಹಲಿಯ ಮಾಜಿ ಅಧ್ಯಕ್ಷ ಡಾ.ರಾಮಜೀ ಸಿಂಗ ಅವರು ಮಾತನಾಡಿ, ಸಮುದಾಯದ ಆರೋಗ್ಯ ರಕ್ಷಣೆ ಮತ್ತು ಸಾಂಕ್ರಾಮಿಕ ರೋಗಗಳನ್ನು ತಡೆಯುವಲ್ಲಿ ಹಾಗೂ ಜೀವನಶೈಲಿಯ ಅಸ್ವಸ್ತತೆಗಳನ್ನು ಅಭಿವೃಶೀಲಗೊಳಿಸುವಲ್ಲಿ ಹೋಮಿಯೋಪೆಥಿ ವೈದ್ಯರ ಪಾತ್ರ ಅತೀ ಮುಖ್ಯವಾಗಿದೆ ಎಂದು ಅವರು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಭರತೇಶ ಶೀಕ್ಷಣ ಸಂಸ್ಥೆಯ ಕಾರ್ಯದರ್ಶಿ ವಿನೋದ ದೊಡ್ಡಣ್ಣವರ ಅವರು ಮಾತನಾಡಿ ಇಂದು ಹೋಮಿಯೋಪೆಥಿ ಚಿಕಿತ್ಸಾ ಪದ್ದತಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಆಡಳಿತಾತ್ಮಕವಾಗಿ, ಶೈಕ್ಷಣಿಕವಾಗಿ, ಅಭ್ಯಾಸ ಪಠ್ಯಕ್ರಮವಾಗಿ ಹಾಗೂ ಚಿಕಿತ್ಸಾ ಪದ್ದತಿಯಾಗಿ ಎಲ್ಲದರಲ್ಲೂ ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿದೆ. ಸರಕಾರಗಳು ಈ ಸಮಸ್ಯೆಗಳತ್ತಗಮನಹರಿಸಿ ಈ ಬಗ್ಗೆ ನಿರ್ಧಿಷ್ಟವಾದ ನಿಲುವುಗಳನ್ನು ಕೈಗೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ರಾಜೀವ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ ಪ್ರಯತ್ನಿಸಬೇಕೆಂದು ಹೇಳಿದರು. ಕರೋನಾ ಕಾಲದಲ್ಲಿ ಹೋಮಿಯೋಪೆಥಿಕ ಮತ್ತು ಆಯುಷ್ಯ ವೈದ್ಯಾಧಿಕಾರಿಗಳು ಇಡಿ ದೇಶದಲ್ಲಿ ತಮ್ಮದೆ ಆದ ಸೇವೆಯನ್ನು ನೀಡಿದ್ದಾರೆ. ಕಠಿಣ ಸಂದರ್ಭದಲ್ಲಿ ವೈದ್ಯರ ಕೊರತೆ ನಿಗಿಸಿ ಜನರಿಗೆ ಸಕಾಲದಲ್ಲಿ ಚಿಕಿತ್ಸೆ ನೀಡಿದ್ದರಿಂದ ಲಕ್ಷಾಂತರ ಜನರ ಪ್ರಾಣವನ್ನು ಉಳಿಸಿದ್ದಾರೆ. ಹಾಗಾಗಿ ಹೋಮಿಯೋಪೆಥಿಕ ಚಿಕಿತ್ಸಾ ಮಟ್ಟದಲ್ಲಿ ಸಂಶೋಧನೆಗಳು ನಡೆಯಬೇಕಾಗಿದೆ ಎಂದರು.

ವೇದಿಕೆ ಮೇಲೆ ಭರತೇಶ ಶೀಕ್ಷಣ ಸಂಸ್ಥೆಯ ಉಪಾಧ್ಯಕ್ಷ ಶ್ರೀಪಾಲ ಖೇಮಲಾಪೂರೆ, ಖಜಾಂಚಿ ಭೂಷಣ ಮಿರ್ಜಿ,ಕರ್ನಾಟಕ ಹೋಮಿಯೋಪೆಥಿ ಮಹಾವಿದ್ಯಾಲಯಗಳ ಒಕ್ಕೂಟದ ಅಧ್ಯಕ್ಷ ಚಂದ್ರಶೇಖರ ಮೊದಲಾದವರು ಉಪಸ್ಥಿತರಿದ್ದರು.

ಭುವನೇಶ್ವರಿ ಹಾಗೂ ಸಂಗಡಿಗರಿಂದ ಸ್ವಾಗತ ಗೀತೆ ಹಾಡಲಾಯಿತು.

ಭರತೇಶ ಹೋಮಿಯೋಪೆಥಿ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷೆ ಡಾ. ಸಾವಿತ್ರಿ ದೊಡ್ಡಣ್ಣವರ ಅತಿಥಿಗಳನ್ನು ಸ್ವಾಗತಿಸಿದರು. ಡಾ. ಪ್ರದೀಪಕುಮಾರ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ರಾಜಶ್ರೀ ಮಿಸಾಳೆ ಮತ್ತು ಡಾ.ಜ್ಯೋತಿ ದಾಬೋಳಕರ ಅತಿಥಿಗಳನ್ನು ಪರಿಚಯಿಸಿದರು.ಪ್ರಾಚಾರ್ಯ ಡಾ. ಶ್ರೀಕಾಂತ ಕೊಂಕಣಿ ವಂದಿಸಿದರು. ಡಾ,ಮಿಲಿಂದ ಬೆಳಗಾಂವಕರ ನಿರೂಪಿಸಿದರು.

ಈ ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನದಲ್ಲಿ ವಿವಿಧ ವಿಷಯಗಳ ಕುರಿತು ಪ್ರಬಂಧಗಳನ್ನು ಮಂಡಿಸಲಾಯಿತು.

ಈ ಸಮ್ಮೇಳನದಲ್ಲಿ ಒಟ್ಟು 1400 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮುಂಬೈನ ಖ್ಯಾತ ಹೋಮಿಯೋಪೆಥಿಕ ತಜ್ಞ ಡಾ.ಫಾರುಖ ಜೆ.ಮಾಸ್ಟರ ಮತ್ತು ಕೊಲ್ಕತ್ತಾ ಪಟ್ಟಣ್ಣದ ಡಾ.ಸಪ್ತರ್ಷಿ ಬ್ಯಾನರ್ಜಿ ಅವರು ವಿಶೇಷ ಉಪನ್ಯಾಸಕರಾಗಿ ಆಗಮಿಸಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದರು.

# ಯಶಸ್ಸನ್ನು ಮಾತ್ರ ನೋಡಿ ಚಿತ್ರರಂಗದಲ್ಲಿ ಕಾಲಿಡಬೇಡಿ: ನಟಿ ಉಮಾಶ್ರೀ



**ಬೆಳಗಾವಿ :** ಪ್ರಸಿದ್ಧ ಕನ್ನಡ ನಟಿ ಹಾಗೂ ಮಾಜಿ ಸಚಿವರಾದಉಮಾಶ್ರೀಅವರುಮಹಾಂತೇಶನಗರದ ಮಹಿಳಾ ಕಲ್ಯಾಣ ಸಂಸ್ಥೆ ಬೆಳಗಾವಿ ಹಾಗೂ ನಮ್ಮೂರ ಬಾನುಲಿ ಸಮುದಾಯ ರೇಡಿಯೋ ಕೇಂದ್ರಕ್ಕೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಹೃದಯದಿಂದ ಮೆಚ್ಚಿ, ನಮ್ಮೂರ ಬಾನುಲಿ ರೇಡಿಯೋದಲ್ಲಿ ವಿಶೇಷ ಸಂದರ್ಶನವೊಂದನ್ನು ನೀಡಿದರು.

ಸಂದರ್ಶನದಲ್ಲಿ ಉಮಾಶ್ರೀ ತಮ್ಮ ಜೀವನದ ಪ್ರೇರಣಾದಾಯಕ ಘಟನೆಗಳನ್ನು ಹಂಚಿಕೊಂಡರು. ರಂಗಭೂಮಿಯ ಮೂಲಕ ಜೀವನಕ್ಕೆ ದಿಕ್ಕು ಸಿಕ್ಕಿದ್ದು, ಶ್ರದ್ಧೆ ಹಾಗೂ ಶ್ರಮದಿಂದ ನಾಟಕಗಳಲ್ಲಿ ಪಾಲ್ಗೊಂಡು, ಬಳಿಕ ಚಿತ್ರರಂಗದಲ್ಲಿ ತಮ್ಮ ಹೆಜ್ಜೆ ಗುರುತು ಮೂಡಿಸಿದ್ದಾಗಿ ವಿವರಿಸಿದರು. ನಿರೂಪಕ ಆರ್.ಜೆ ಚೇತನ ಅವರ ಪ್ರಶ್ನೆಗೆ ಪ್ರತಿಕ್ರಿಯಿಸುತ್ತಾ, "ಯಾವುದೇ ಪಾತ್ರವನ್ನು ಜೀವಂತವಾಗಿ ತಲುಪಿಸಲು ರಂಗಭೂಮಿ ನೀಡಿದ ತರಬೇತಿಯು ಬಹುಮುಖ್ಯ. ನಟನೆ ಮಾತ್ರವಲ್ಲ, ಜಗತ್ತಿನ ಅವಲೋಕನೆಯೂ ಕಲಾವಿದನಿಗೆ ಅಗತ್ಯ" ಎಂದು ಹೇಳಿದರು. ಅವರು ಹೊಸ ತಲೆಮಾರಿನ ಕಲಾವಿದರಿಗೆ ಸಂದೇಶ ನೀಡುತ್ತಾ, "ಯಶಸ್ಸನ್ನು ಮಾತ್ರ ನೋಡಿ ಚಿತ್ರರಂಗದಲ್ಲಿ ಕಾಲಿಡಬೇಡಿ. ಪೂರ್ಣ ತಯಾರಿ, ಪರಿಶ್ರಮ ಮತ್ತು ಕಷ್ಟ ಸಹಿಸುವ ಮನೋಭಾವ ಅಗತ್ಯ. ಆಗ ಮಾತ್ರ ನಿಜವಾದ ಸಾಧನೆ ಸಾಧ್ಯ" ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಮಹಿಳಾ ಕಲ್ಯಾಣ ಸಂಸ್ಥೆಯ ಸಂಸ್ಥಾಪಕ ಹಾಗೂ ಸಂಯೋಜಕರಾದ ಎಂ.ಎಸ್. ಚೌಗಲಾ, ಜಾಗತಿಕ ಲಿಂಗಾಯತ ಮಹಾಸಭೆಯ ಜಿಲ್ಲಾಧ್ಯಕ್ಷ ಬಸವರಾಜ ರೊಟ್ಟಿ, ನಗರ ಘಟಕದ ಕಾರ್ಯದರ್ಶಿ ಸಿ.ಎಮ್. ಬೂದಿಹಾಳ,ಸಮುದಾಯ ರೇಡಿಯೋ ಕೇಂದ್ರದ ಆರ್.ಜೆ ಚೇತನ, ಹಾಗೂ ಆರ್. ಜೆ ಮೀರಾ, ಶಿವಂ ಚೌಗಲಾ ಹಾಗೂ ಸಂಸ್ಥೆಯ ಎಲ್ಲ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ವಚನ ಸಾಹಿತ್ಯ ಅಳಿವಿನಿಂದ ಉಳಿವಿಗೆ: ಡಾ. ಎಂ.ನಾಗರಾಜ




**ವಿಜಯಪುರ :** 12ನೇ ಶತಮಾನದಲ್ಲಿ ಶರಣರ ಕ್ರಾಂತಿಯುಂಟಾದಾಗ ಬಸವಾದಿಶರಣರುತಾಡೋಲೆಗಳನ್ನು ಬೆನ್ನಿಗೆ ಕಟ್ಟಿಕೊಂಡು, ಮಡಿವಾಳ ಮಾಚಿದೇವನ ಮುಖಂಡತ್ವದಲ್ಲಿ ದಂಡಿನ ಯಾತ್ರೆ ಮೂಲಕ ಅಳಿವಿನಂಚಿನಲ್ಲಿದ್ದಾಗ ಉಳಿವಿಯಲ್ಲಿ ವಚನ ಸಾಹಿತ್ಯವನ್ನು ರಕ್ಷಣೆ ಮಾಡಿ ಆ ಸಾಹಿತ್ಯದ ಬುತ್ತಿಯನ್ನು ಉಣಬಡಿಸಿದ ಕೀರ್ತಿ ಅಂದಿನ ಶರಣರಿಗೆ ಸಲ್ಲುತ್ತದೆ ಎಂದು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಂ. ನಾಗರಾಜ ಹೇಳಿದರು.

ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದಲ್ಲಿ ವಚನ ಸಾಹಿತ್ಯ ಸಂರಕ್ಷಣೆ ಕುರಿತು ಅವರು ಮಾತನಾಡಿದರು.

14ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಪ್ರೌಢದೇವರಾಯನ ಕಾಲದಲ್ಲಿ ಮುಂದೆ 17ನೇ ಶತಮಾನದಲ್ಲಿ ನೂರೊಂದು ವಿರಕ್ತರು ವಚನ ಸಾಹಿತ್ಯವನ್ನು ಸಂರಕ್ಷಿಸುತ್ತ ಬಂದಿದ್ದರಿಂದ ನಮಗೆ ಅವು ಇಂದು ನೋಡಲು ಸಿಗುವಂತಾಗಿವೆ ಎಂದು ನುಡಿದರು.

ಡಾ. ಎಸ್.ಕೆ. ಕೊಪ್ಪಾ ಅವರು ಮಾತನಾಡಿ, ಡಾ. ಹಳಕಟ್ಟಿಯವರು ವಿದ್ಯಾರ್ಥಿ ದೆಶೆಯಿಂದಲೆ ನೋವು, ಕಹಿ, ಅಸಹನೀಯತೆ ಎಲ್ಲ ದೌರ್ಬಲ್ಯಗಳನ್ನು ಮೆಟ್ಟಿನಿಂತು, ನಮಗೆ ಜೇನು ಹುಳ ಕಡಿದರೂ ಚಿಂತೆಯಿಲ್ಲ ಆದರೆ ಜೇನು ಕೊಡುವುದು ನನ್ನಧರ್ಮ ಎಂದು ಭಾವಿಸಿದವರು ಎಂದು ಬಣ್ಣಿಸಿದರು.

ಡಾ. ಎಂ.ಎಸ್.ಮದಭಾವಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ವಿ.ಡಿ.ಐಹೊಳ್ಳಿ ಸ್ವಾಗತಿಸಿ ಪರಿಚಯಿಸಿದರು. ಡಾ. ಎಸ್.ಪಿ. ಶೇಗುಣಸಿ ವಂದಿಸಿದರು.ಡಾ.ಸುಭಾಸಕನ್ನೂರುನಿರೂಪಿಸಿದರು. ಸಮಾರಂಭದಲ್ಲಿಜಿ.ಬಿ.ಸಾಲಕ್ಕಿ,ಎಸ್.ಬಿ.ದೊಡಮನಿ, ಅನೀಲ ಹೊಸಮನಿ, ಪ್ರಭು ಪಾಟೀಲ, ಅಂಬಾದಾಸ ಜೋಶಿ, ಎಂ.ಎಲ್. ಮದಭಾವಿ, ಎಸ್.ಎನ್. ಶೇಗುಣಸಿ, ನೂತನ ಬ್ಯಾಕೋಡ ಮತ್ತು ಶಕುಂತಲಾ ದೊಡಮನಿ ದಂಪತಿಗಳು, ಎಸ್.ಎಚ್. ಕಸಬೇಗೌಡ, ದುಂಬಾಳೆ, ನೀಲಮ್ಮ ಮಠ, ಶಿರಹಟ್ಟಿ ಮತ್ತು ಜೆ.ಎಸ್. ಎಸ್. ಬಿ.ಇಡಿ ಕಾಲೇಜು ವಿದ್ಯಾರ್ಥಿಗಳು ಹಾಜರಿದ್ದರು.

# ತಂಬಾಕು ಸೇವನೆಯ ದುಷ್ಪರಿಣಾಗಳ ಕುರಿತು ಜಾಗೃತಿ ಕಾರ್ಯಕ್ರಮ



**ಬೆಳಗಾವಿ :** ಕೇಂದ್ರ ಕಾರಾಗೃಹ ಬೆಳಗಾವಿಯಲ್ಲಿ ಕಾರಾಗೃಹದ ನಿವಾಸಿಗಳಿಗಾಗಿ ತಂಬಾಕು ಹಾಗೂ ಮದ್ಯ ಸೇವನೆಯದುಷ್ಪರಿಣಾಗಳು ಕುರಿತು ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮವು ಆರೋಗ್ಯ ಇಲಾಖೆ ಹಾಗೂ ಕೇಂದ್ರ ಕಾರಾಗೃಹ ಬೆಳಗಾವಿ ಇವರುಗಳ ಸಹಯೋಗದಲ್ಲಿ ಏರಿಡಸಲಾಗಿತ್ತು. ಉದ್ಘಾಟಕರಾಗಿ ಮಾನಸಿಕ ಆರೋಗ್ಯ ಪರೀಶಿಲನಾಮಂಡಳಿಯಅಧ್ಯಕ್ಷರುಹಾಗೂ ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಡಿ.ಆರ್ ರೇನಕೆ ಆಗಮಿಸಿದ್ದರು. ಅಧ್ಯಕ್ಷತೆಯನ್ನು ಕಾರಾಗೃಹದ ಅಧೀಕ್ಷಕರಾದ ವಿ ಕೃಷ್ಣಮೂರ್ತಿ ವಹಿಸಿದರು. ಹಾಗೂ ಮನೋರೋಗ ವೈಧ್ಯರಾದ ಡಾss ಸರಸ್ವತಿ ಹಾಗೂ ಮನ:ಶಾಸ್ತ್ರಜ್ಞೆ ಶ್ರೀಮತಿ ಆಶಾ ಹಿರೇಮಠ ಉಪಸ್ಥಿತರಿದ್ದರು.

ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಡಿ.ಆರ್ ರೇನಕೆ ಮಾತನಾಡಿ ಇಂದಿನ ಆದುನಿಕ ಯುಗದಲ್ಲಿ ಅನೇಕ ಜನರು ತಂಬಾಕು ಮದ್ಯ ಸೇವನೆಯಂತಹ ದುಷ್ಚಟಗಳಿಗೆ ಒಳಗಾಗಿ ತಮ್ಮ ಅಮುಲ್ಯವಾದ ಜೀವನವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ. ಕಾರಣ ಇಂತಹ ದುಷ್ಚಟಗಳಿಂದ ದೂರವಿದ್ದು ಉತ್ತಮ ಆರೋಗ್ಯಕರ ಜೀವನ ಸಾಗಿಸಬೇಕು ಹಾಗೂ ಬಿಡುಗಡೆ ನಂತರ ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ಬಾಳಬೇಕು ಎಂದು ಹೇಳಿದರು.

ಕಾರಾಗೃಹದ ಮನೋರೋಗ ವೈಧ್ಯರಾದ ಡಾss ಸರಸ್ವತಿ ಮಾತನಾಡಿ ತಂಬಾಕು ಸೇವನೆಯು ಹಾಗೂ ಮದ್ಯ ಸೇವನೆಯಿಂದ ಅನೇಕ ಜನರು ಸಾವನ್ನಪ್ಪುತ್ತಿದ್ದಾರೆ ಇಂತಹ ದುಷ್ಚಟಗಳುಮನುಷ್ಯನನ್ನುಮಾನಸಿಕವಾಗಿ, ದೈಹಿಕವಾಗಿ ಹಾಗೂ ಆರ್ಥಿಕವಾಗಿ ದುರ್ಬಲರನ್ನಾಗಿ ಮಾಡುತ್ತದೆ ಕಾರಣ ಇವುಗಳಿಂದಹೊರಬಂದುತಾವೆಲ್ಲಯೋಗ ದ್ಯಾನ ಪ್ರಾಣಾಯಮ ಮುಂತಾದವುಗಳಲ್ಲಿ ತಮ್ಮನ್ನುತಾವುತೊಡಗಿಸಿಕೊಳ್ಳಬೇಕುಎಂದು ಹೇಳಿದರು. ಕಾರಾಗೃಹದ ಅಧೀಕ್ಷಕರಾದ ವಿ. ಕೃಷ್ಣಮೂರ್ತಿ ಮಾತನಾಡಿ ದುಷ್ಚಟಗಳಿಂದ ಸಂಬಂಧಗಳು ಹಾಳಾಗುತ್ತಿವೆ.

# ಕಾಳಿದಾಸ ಪ್ರೌಢ ಶಾಲೆಗೆ ಜಿ.ಪಂ. ಸಿಇಓ ರಿಷಿ ಆನಂದ ಭೇಟಿ: ಪರೀಶೀಲನೆ



**ವಿಜಯಪುರ :** ವಿಜಯಪುರ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳಾದ ರಿಷಿ ಆನಂದ ಅವರು ಶುಕ್ರವಾರ ನಗರದ ಕಾಳಿದಾಸ ಪ್ರೌಢ ಶಾಲೆಗೆ ಭೇಟಿ ನೀಡಿ ಪರೀಶೀಲನೆ ನಡೆಸಿದರು.

ಶಾಲೆಯ 10ನೇ ತರಗತಿ ವಿದ್ಯಾರ್ಥಿಗಳಿಗೆ ವಿಜ್ಞಾನ ಮತ್ತು ಗಣಿತ ವಿಷಯಗಳ ಕುರಿತು ಬೋಧನೆ ಮಾಡಿದರು. ಬಳಿಕ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಪ್ರತಿ ವಿಷಯಗಳಲ್ಲಿ ಶಿಕ್ಷಕರ ಬೋಧನಾ ಶೈಲಿ, ಬಿಸಿಯೂಟದ ವ್ಯವಸ್ಥೆ ಕುರಿತು ಮಾಹಿತಿ ಪಡೆದುಕೊಂಡರು.ಹತ್ತನೇತರಗತಿವ್ಯಾಸಂಗವಿದಾರ್ಥಿ ಜೀವನದ ಬಹುಮುಖ್ಯ ಘಟ್ಟವಾಗಿದೆ. ಈ ಹಂತದಲ್ಲಿ ವಿದ್ಯಾರ್ಥಿಗಳು ಪ್ರತಿ ವಿಷಯ ಶಿಕ್ಷಕರು ಬೊಧಿಸುವ ದೈನಂದಿನ ಪಾಠದಲ್ಲಿ ಉತ್ಸಾಹದಿಂದ ಶ್ರವಣ ಮಾಡಿ ಮನನ ಮಾಡುವ ಮೂಲಕ ವಿಷಯಗಳನ್ನು ಕರಗತ ಮಾಡಿಕೊಳ್ಳಬೇಕು. ವಿದ್ಯಾರ್ಥಿಗಳು ಶಿಕ್ಷಕರು ನೀಡುವ ವಿಷಯ ಸಂಬಂಧಿ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು. ಅಧ್ಯಯನಶೀಲತೆ ರೂಢಿಸಿಕೊಳ್ಳಬೇಕು. ಕಳೆದ ಸಾಲಿನ ಪ್ರಶ್ನೆಪತ್ರಿಕೆಗಳನ್ನು ಸಂಗ್ರಹಿಸಿಕೊಂಡು, ಅಧ್ಯಯನ ಮಾಡಬೇಕು. ಅರ್ಥವಾಗದ ವಿಷಯಗಳಲ್ಲಿ ಸಂಬಂಧಿಸಿದ ವಿಷಯ ಶಿಕ್ಷಕರಿಂದ ಪರಿಹರಿಸಿಕೊಳ್ಳಬೇಕು. ವಿಷಯಗಳ ಜ್ಞಾನ ಹೊಂದಬೇಕು. ಉನ್ನತ ಗುರಿಯೊಂದಿಗೆ ಮುನ್ನಡೆದು ಯಶಸ್ಸು ಸಾಧಿಸಬೇಕು.ಸಾಧನೆ ಸಾಧಕನ ಸೊತ್ತಾಗಿದೆ. ಈ ಹಂತದಲ್ಲಿ ಚೆನ್ನಾಗಿ ಓದಿ, ಉತ್ತಮ ಫಲಿತಾಂಶ ಪಡೆದು, ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು. ಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ನಿಮ್ಮನ್ನು ನೀವು ಅಣಿಗೊಳಿಸಿಕೊಳ್ಳಬೇಕು. ಉನ್ನತ ಹುದ್ದೆಗಳನ್ನು ಪಡೆಯುವ ಗುರಿ ಹೊಂದಿ, ಆ ಗುರಿಯಡೆಗೆ ಸಾಗಲು ಸತತ ಪ್ರಯತ್ನ ಮಾಡಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತುಗಳನ್ನು ಹೇಳಿದರು.

ಹಾಜರಾತಿ ಪರೀಶೀಲಿಸಿದ ಅವರು, ಶಿಕ್ಷಕ ಸಿಬ್ಬಂದಿ ಸಮಯಪಾಲನೆಗೆ ಒತ್ತು ನೀಡಬೇಕು. ಸಮರ??ಕ ಹಾಜರಾತಿ ನಿರ್ವಹಣೆ ಮಾಡಬೇಕು.ವಿದ್ಯಾಥಿಗಳು ಶಾಲೆಯಿಂದಹೊರಗುಳಿಯದಂತೆನಿಗಾವಹಿಸಬೇಕು. ಮಕ್ಕಳು ಗೈರಾಗದಂತೆ ನೋಡಿಕೊಳ್ಳಲು ಅವರ ಪೋಷಕರಿಗೆ ತಿಳಿಹೇಳಬೇಕು. ಶಾಲೆಯಲ್ಲಿ ಸ್ವಚ್ಛತೆ ಕುರಿತು ಗಮನ ಹರಿಸಬೇಕು. ಪ್ರತಿನಿತ್ಯ ಶಾಲೆಯ ಎಲ್ಲಾ ಕೊಠಡಿಗಳು, ಒಳಾಂಗಣ ಹಾಗೂ ಹೊರಾಂಗಣ ಆವರಣಗಳನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಬಿಸಿಯೂಟದ ಅಡುಗೆ ಕೋಣೆಯಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಕುಡಿಯುವ ನೀರು, ಶೌಚಾಲಯ,ಗಾಳಿ,ಬೆಳಕು ವ್ಯವಸ್ಥೆಗಳನ್ನು ಇರುವಂತೆ ನೋಡಿಕೊಳ್ಳಬೇಕು.

ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೆಚ್ಚಳಕ್ಕೆ ಈಗಿನಿಂದಲೇ ಯೋಜನಾಬದ್ಧ ಕಾರ್ಯಸೂಚಿ ಹಾಕಿಕೊಂಡು ನಿರ್ವಹಿಸಿ, ಈ ಕುರಿತು ಶಾಲಾ ಮುಖ್ಯ ಶಿಕ್ಷಕರು ಹಾಗೂ ಎಲ್ಲ ವಿಷಯಗಳ ಬೋಧಕರು ವಿಶೇಷ ಗಮನಹರಿಸಿ ಕಾರ್ಯ ನಿರ್ವಹಿಸಬೇಕು. ಆಗಾಗ್ಗೆ ಆಂತರಿಕ ಪರೀಕ್ಷೆಗಳನ್ನು ಏರಿಡಸಿ, ಪ್ರತಿಶತ ಫಲಿತಾಂಶಕ್ಕೆ ಶ್ರಮಿಸಬೇಕು ಎಂದು ಶಾಲಾ ಮುಖ್ಯ ಶಿಕ್ಷಕರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಶಾಲಾ ಮುಖ್ಯಗುರು ಎಸ್. ಪಿ. ಬಿರಾದಾರ, ಶಿಕ್ಷಕರಾದ ಎಸ್. ಎಮ್ ಬೋಸ್ಲೆ, ಎಸ್. ಪಿ. ಭಜಂತ್ರಿ ಸೇರಿದಂತೆ ಬೊಧಕ ಹಾಗೂ ಬೋಧಕೇತರ ಸಿಬ್ಬಂದಿ ಇದ್ದರು.

# ಕ್ರೀಡಾ ಪ್ರಶಸ್ತಿಗೆ ಅರ್ಜಿ ಆಹ್ವಾನ

**ಬಾಗಲಕೋಟೆ :** 2024ನೇ ಸಾಲಿನ ಟಿಎನ್‌ಎನ್‌ಎಎ ( Tenzing Norjy National Adventure Award ) ಅರ್ಜಿಗಳನ್ನು ಯುವ ವ್ಯವಹಾರ ಮತ್ತು ಕ್ರೀಡಾ ಮಂತ್ರಾಲಯದಿಂದ ಆಹ್ವಾನಿಸಲಾಗಿದ್ದು, ಬಾಗಲಕೋಟೆ ಜಿಲ್ಲೆಯ 2022, 2023, 2024ನೇ ಸಾಲಿನಲ್ಲಿ ಜಲ ಸಾಹಸ, ವಾಯು ಸಾಹಸ ಮತ್ತು ಭೂ ಸಾಹಸ ಕ್ರೀಡೆಗಳಲ್ಲಿ ಸಾಧನೆ ಮಾಡಿರುವ ಕ್ರೀಡಾಪಟುಗಳು ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ಅರ್ಹರಿದ್ದು, ಸದರಿ ಕ್ರೀಡಾಪಟುಗಳು ಅರ್ಜಿಗಳನ್ನು https://awards.gov.in/Home/AwardLibrary ಅಲ್ಲಿ ತಿಳಿಸಿದ ಪೋರ್ಟಲ್‌ನಲ್ಲಿ ಇರುವ ಮಾರ್ಗಸೂಚಿ ಅನುಸಾರ ಅರ್ಜಿಗಳನ್ನು ಜೂನ್.01 ರಿಂದ ಜುಲೈ.30 ರ ಒಳಗಾಗಿ ಆನ್‌ಲೈನ್ ಮೂಲಕ ಸಲ್ಲಿಸಬಹುದಾಗಿದೆ. ಇಚ್ಛೆಯುಳ್ಳ ಅರ್ಜಿದಾರರು ಆನ್‌ಲೈನ್ ಅರ್ಜಿ ನಮೂನೆಯಲ್ಲಿ ಯಾವುದೇ ಸಮಸ್ಯೆಗಳು ಎದುರಾದರೆ, ಸಹಾಯಕ್ಕಾಗಿ ಟೋಲ್ ಫ್ರೀ ನಂಬರ್ : 01123386898 ನ್ನು ಸಂಪರ್ಕಿಸಬಹುದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ಬಿ.ಜೆ. ಇಂಡಿ ಅವರನ್ನು ಅಮಾನತ್ತುಗೊಳಿಸಲು ಆಗ್ರಹ




**ವಿಜಯಪುರ :** ಡಾ, ಬಿ.ಆರ್. ಅಂಬೇಡ್ಕರ ಅಭಿವೃದ್ಧಿ ನಿಗಮ ವಿಜಯಪುರ ವ್ಯಸ್ಥಾಪಕ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ.ಜೆ.ಇಂಡಿ ಅವರು ಸಮಾಜ ಕಲ್ಯಾಣ ಇಲಾಖೆಗೆ ಬರುವ ಫಲಾನುಭವಿಗಳ ಹಾಗೂ ಸಾರ್ವಜನಿಕರ ಜೊತೆ ಅಸಭ್ಯವಾಗಿ ವರ್ತಿಸುತ್ತಾ, ಇಲಾಖೆಯಲ್ಲಿರುವ ಮಾಹಿತಿಗಳನ್ನು ಸರಿಯಾಗಿ ನೀಡದೆ ತಾವು ಇರುವುದು ಸಾರ್ವಜನಿಕರ ಸೇವೆಗಾಗಿ ಎಂಬುವುದನ್ನು ಮರೆತು ಅಧಿಕಾರದ ದರ?? ಮೆರೆಯುತ್ತಿದ್ದಾರೆ ಕೂಡಲೇ ಇವರ ಮೇಲೆ ಶಿಸ್ತು ಕ್ರಮ ಮತ್ತು ಅಮಾನತ್ತುಗೊಳಿಸಬೇಕೆಂದು ಆಗ್ರಹಿಸಿ ಅಂಬೇಡ್ಕರ್ ಸ್ವಾಭಿಮಾನಿ ಸೇನೆಯ ಪದಾಧಿಕಾರಿಗಳು ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಶರಣು ಎಸ್. ಜಮಖಂಡಿ ಮಾತನಾಡಿ, ದೇವರ ಹಿಪ್ಪರಗಿಯ ರಮೇಶ ತಂ. ಮಡಿವಾಳಪ್ಪ ಮಲ್ಲಾರಿ ಅವರಿಗೆ ಅಂಬೇಡ್ಕರ ಅಭಿವೃದ್ಧಿ ನಿಮಗದಿಂದ ಕೊಳವೆ ಬಾವಿ ಮಂಜೂರಾಗಿದ್ದರು, ಸಂಬಂಧಪಟ್ಟ ಜಿಲ್ಲಾ ನಿಗಮದ ವ್ಯವಸ್ಥಾಪಕರಾದ ಬಿ.ಜೆ.ಇಂಡಿ ಇವರಿಗೆ ಹಲವಾರು ಬಾರಿ ಬೇಟಿಯಾಗಿ ನಮ್ಮ ಜಮೀನಕ್ಕೆಯಾವಾಗ ಕೋಳವೆ ಬಾವಿ ಕೋರೆಸುತ್ತಿರಿ ಎಂದು ಕೇಳಲು ಹೊದರೆ, ಉಢಾಫೆ ಉತ್ತರ ನೀಡುತ್ತಿದ್ದಾರಂತೆ. ಪೋನ ಮುಖಾಂತರ ನೀವು ಕೆಳಬೇಡಿ. ನಿಮಗೆ ಹೇಳುವ ಅವಶ್ಯಕತೆ ನಮಗಿಲ್ಲ. ನೀವು ಏನು ಬೇಕಾದರು ಮಾಡಿಕೊಳ್ಳಿ ಎಂದು ಗದರಿಸುತ್ತಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಅಂಬೇಡ್ಕರ್ ಸ್ವಾಭಿಮಾನಿ ಸೇನೆಯ ಅಧ್ಯಕ್ಷರಾದ ಸುಖದೇವ ಎಸ್. ಕಟ್ಟಿಮನಿ ಮಾತನಾಡಿ, ಬಿ. ಜೆ.ಇಂಡಿ ಅವರು ಸಮಾಜ ಕಲ್ಯಾಣ ಅಧಿಕಾರಿಗಳಾಗಿನಿಗಮದವ್ಯವಸ್ಥಾಪಕರಾಗಿ ಎರಡೂ ಇಲಾಖೆ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ನಾನು ರಾಜಕೀಯದಿಂದ ಈ ಹುದ್ದೆಗೆ ಬಂದಿರುತ್ತೇನೆ. ನನಗೆ ಯಾರು ಹೇಳುವ ಅವಶ್ಯಕತೆ ಇಲ್ಲಾ. ಎಂದು ಹೀಗೆ ಸುಖಾ ಸುಮ್ಮನೆ ಸಾರ್ವಜನಿಕರ ಮೇಲೆ ಹರಿ ಹಾಯುತ್ತಿದ್ದಾರೆ.

ಮತ್ತು ನಮ್ಮ ಸಮಿತಿಯವರನ್ನು ಬೇದರಿಸಿ ಜಾತಿನಿಂದನೆ ಮಾಡಿರುತ್ತಾರೆ. ಇವರ ಮೇಲೆ ಕ್ರಮ ಜರುಗಿಸಿ. ಇವರನ್ನು ಅಮಾನತ್ತು ಗೊಳಿಸಬೇಕು.

ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಅಂಬೇಡ್ಕರ ಸ್ವಾಭಿಮಾನಿ ಸೇನೆ ವತಿಯಿಂದ ಈ ಅಧಿಕಾರಿ ವಿರುದ್ಧ ಉಗ್ರವಾದ ಪ್ರತಿಭಟನೆ ಮಾಡಲಾಗುವುದು ಎಂದು ಮನವಿಯಲ್ಲಿ ಎಚ್ಚರಿಸಿದ್ದಾರೆ.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೋಹನ ಆಲಗೂರ,ಜಿಲ್ಲಾ ಉಪಾಧ್ಯಕ್ಷ ಸುಭಾಶಚಂದ್ರ ಹೊನ್ನಕಂಟ್ಟಿ, ತಿಪ್ಪಣ್ಣ ಮೇಲಿನಮನಿ, ಕಮಲಸಾಬ ಕಾಟಮನಳ್ಳೀ, ಶಿವಶರಣ ಕಾಂಬಳೆ, ತುಕಾರಾಮ ಮಮದಾಪೂರ, ಮುನ್ನಾ ಕೋಜಿಗಿಲ, ಶಿವಾನಂದಕೋಳಿ,ಟಿಟಿ.ಚವ್ಹಾಣಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ದೇವಸ್ಥಾನಗಳು ಸತ್ಸಂಗದ ತಾಣಗಳಾಗಲಿ: ಖೊದ್ನಾಪೂರ




**ವಿಜಯಪುರ :** ಸತ್ಸಂಗ ಎಂದರೆ ಸತ್ಯದ ಸಂಗಡ ಅಥವಾ ದೇವರ ಧ್ಯಾನ, ಅಧ್ಯಾತ್ಮಿಕ ಬೆಳವಣಿಗೆ ಮಾಡಿಕೊಳ್ಳುವ ಸಾಧನ. ಜೀವನದಲ್ಲಿ ಶಾಂತಿ ಮತ್ತು ನೆಮ್ಮದಿ ಕಂಡುಕೊಳ್ಳಲು ಸತ್ಸಂಗ ಸಹಾಯಕಾರಿ. ಜೀವನದ ಸಾರ್ಥಕತೆ ಮತ್ತು ಅಧ್ಯಾತ್ಮಿಕ ಜ್ಞಾನವನ್ನು ಪಡೆಯಲು ದೇವಸ್ಥಾನಗಳು ಸತ್ಸಂಗದ ತಾಣಗಳು. ಸತ್ಸಂಗಗಳಲ್ಲಿ ಭಾಗವಹಿಸುವುದರಿಂದ ನಮ್ಮಲ್ಲಿರುವ ನಕಾರಾತ್ಮಕ ಭಾವನೆಗಳು ಸದಾಚಾರ, ಸನ್ನಡತೆ, ಸಚ್ಚಾರಿತ್ರ್ಯ, ಸದ್ಭಾವ, ಸದ್ಗುಣಗಳು ಒಡಮೂಡುತ್ತವೆ ಎಂದು ಪ್ರೊ. ಎಂ.ಎಸ್.ಖೊದ್ನಾಪೂರ ಅವರು ಅಭಿಪ್ರಾಯಪಟ್ಟರು.

ಅವರು ಶನಿವಾರ 5ರಂದು ನಗರದ ಅಥಣಿ ರಸ್ತೆಯಲ್ಲಿರುವ ಎನ್.ಜಿ.ಓ ಕಾಲನಿಯಲ್ಲಿರುವ ಜೈ ಆಂಜನೇಯ ದೇವಸ್ಥಾನದಲ್ಲಿ ಜರುಗಿದ ಸತ್ಸಂಗ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಸಂಘರ್ಷ–ಒತ್ತಡಮಯವಾಗುತ್ತಿರುವ ಇಂದಿನ ಬದುಕಿನಲ್ಲಿ ಮನುಷ್ಯನಿಗೆ ಹಣ ಸಂಪಾದನೆ, ಆಸ್ತಿ ಗಳಿಕೆ ಮತ್ತು ಇನ್ನಿತರ ವಿಷಯಗಳಿಮದ ಒಂದಿಷ್ಟೂ ಮಾನಸಿಕ ನೆಮ್ಮದಿ, ಕೊಂಚ ರಿಲ್ಯಾಕ್ಸ್ ಇಲ್ಲದಂತಾಗಿದೆ. ಅದಕ್ಕಂತಲೇ ಎನ್.ಜಿ.ಓ. ಕಾಲನಿಯ ಆಂಜನೇಯ ದೇವಸ್ಥಾನದಲ್ಲಿ ಸನ್ಮಾರ್ಗದತ್ತ ಸಾಗುವಂತೆ ಪ್ರೇರೇಪಿಸುವ ಮಹೋನ್ನತವಾದ ಉದ್ದೇಶದಿಂದ ನಗರದ ಅಥಣಿ ರಸ್ತೆಯಲ್ಲಿರುವ ಎನ್.ಜಿ.ಓ ಕಾಲನಿಯಲ್ಲಿರುವ ಜೈ ಆಂಜನೇಯ ದೇವಸ್ಥಾನದಲ್ಲಿ ಪ್ರತಿ ಶನಿವಾರದಂದು ಸಂಜೆ 6 ಗಂಟೆಯಿಂದ 8 ಗಂಟೆಯವರೆಗೆ ಸತ್ಸಂಗವನ್ನು ಆಯೋಜಿಸಲಾಗುತ್ತಿದೆ, ದೇವಸ್ಥಾನದಲ್ಲಿ ಸುಮಾರು 5 ವರ್ಷಗಳಿಂದ ಕೀರ್ತನೆ, ಅಧ್ಯಾತ್ಮಿಕ ಗೋಷ್ಠಿ, ಭಜನೆ, ತತ್ವಪದ ಮತ್ತು ವಚನ, ದಾಸ ವಾಣಿ ಮತ್ತು ಸಂಗೀತ ಕಾರ್ಯಕ್ರಮ ಮತ್ತು ಸಾಮೂಹಿಕ ಹನುಮಾನ ಚಾಲೀಸ್ ಪಠಣದಂತಹ ಮೂಲಕ ಸತ್ಸಂಗ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ಎಂದರು.

ದೇವಸ್ಥಾನದ ಅಧ್ಯಕ್ಷ ಸಂತೋಷ ಪಾಟೀಲ ಮಾತನಾಡಿ, ಜನರು ತಮ್ಮ ಜೀವನದಲ್ಲಿ ಸನ್ನಡತೆ, ಸಚ್ಚಾರಿತ್ರ್ಯ, ಮಾನವೀಯ ಮೌಲ್ಯಗಳು, ನೈತಿಕ, ವೈಚಾರಿಕ ಮತ್ತು ಅಧ್ಯಾತ್ಮಿಕತೆಯ ವಿಷಯಗಳ ಬಗೆಗೆ ಅರಿವು ಮೂಡಿಸುವದರ ಜತೆಗೆ ನವರಸಪುರ ಸುತ್ತಮುತ್ತಲಿನ ಕಾಲನಿಗಳ ನಾಗರೀಕರಲ್ಲಿ ಉತ್ತಮ ಆಚಾರ–ವಿಚಾರ, ಸಂಸ್ಕೃತಿ–ಸಂಸ್ಕಾರ, ಧಾರ್ಮಿಕ–ಸಾಮಾಜಿಕ ಮತ್ತು ಅಧ್ಯಾತ್ಮಿಕ ವಿಚಾರಧಾರೆಗಳನ್ನು ಒಡಮೂಡಿಸಲಾಗುತ್ತಿದೆ ಎಂದರು.

ರಶ್ಮೀ ಕುಮಟಗಿ ಇವರಿಂದ ದಾಸವಾಣಿ, ವಚನ ಗಾಯನ, ರಾಮ ನಾಮ ಮತ್ತು ದೇವರ ನಾಮಸ್ಮರಣೆಯ ಸಂಗೀತ ಕಾರ್ಯಕ್ರಮ ಮೂಡಿಬಂತು.

ಬಿ . ಆ ರ್ . ಬಿ ರಾ ದಾ ರ್ , ಎಸ್.ಜಿ.ನಿಂಗನಗೌಡ್ರರ, ಬಾಬು ಕೋಲಕಾರ, ಶಿವಪ್ಪ ಸಾವಳಗಿ, ನಾನಾಸಾಬ ಕೂಟನೂರ, ಶಿವಾನಂದ ಬಿಜ್ಜರಗಿ, ವೆಂಕಟೇಶ ಹೊಸಮನಿ, ಪ್ರೊ. ಎಂ.ಆರ್. ಜೋಶಿ, ನಾಗರಾಜ.ಎಸ್.ಎಚ್, ಬಿ.ಆರ್.ಪೂಜಾರಿ, ಎಸ್.ಡಿ.ಪತ್ತಾರ, ಎಸ್.ಎಸ್.ಪೂಜಾರಿ, ಎಸ್.ಆರ್.ಬಶೆಟ್ಟಿ, ಶ್ರೀರಾಂ ದೇಶಪಾಂಡೆ, ಶಕುಂತಲಾ ಅಂಕಲಗಿ, ಜಯಶ್ರೀ ಚಾಂದಕವಠೆ, ಸರೋಜಿನಿ ಬಿರಾದಾರ, ಭಾರತಿ ಬಿರಾದಾರ, ಮಹಾಂತೇಶ್ವರಿ ಪಾಟೀಲ, ಲಲಿತಾ ರಜಪುರ, ಮಂಜುಳಾ ಜೋಶಿ, ಸಿದ್ದಮ್ಮ ಪಾಟೀಲ,ಪ್ರೇಮಾ ಕನ್ನೂರ,ಭಾರತಿ ಬಣಗಾರ ಇನ್ನಿತರರು ಉಪಸ್ಥಿತರಿದ್ದರು. ಹಿರಿಯರು, ಮಹಿಳೆಯರು, ಯುವಕರು, ಮಕ್ಕಳು ಸೇರಿದಂತೆ ನವರಸಪುರ ವಿವಿಧ ಕಾಲನಿಗಳ ನೂರಾರು ಮಹಿಳೆಯರು ಭಾಗವಹಿಸಿದ್ದರು.

# ವಿದ್ಯಾರ್ಥಿಗಳು ಪುಸ್ತಕಗಳ ಜೊತೆಗೆ ಪರಿಸರದ ಕಡೆಗೆ ಗಮನಹರಿಸಬೇಕು: ಪುಣೇಕರ್




**ವಿಜಯಪುರ :** ವಿಜಯಪುರ ನಗರದ ಹೆಸರಾಂತ ಶಿಕ್ಷಣ ಸಂಸ್ಥೆಯಾದ ಸಿಕ್ಯಾಬ್ ಪದವಿ ಪೂರ್ವ ಮಹಿಳಾ ಕಾಲೇಜಿನ 2025–26 ನೇ ಶೈಕ್ಷಣಿಕ ವರ್ಷ ಈಗಾಗಲೇ ಪ್ರಾರಂಭವಾಗಿದ್ದು ಪ್ರಥಮ ಪಿಯು ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮ ಉದ್ಘಾಟಿಸಿ ಸಂಸ್ಥೆಯ ನಿರ್ದೇಶಕರಾದ ಸಲಾವುದ್ದಿನ್ ಪುಣೇಕರ್ ಮಾತನಾಡಿದರು.

ಈ ಎರಡು ವರ್ಷಗಳಲ್ಲಿ ವಿದ್ಯಾರ್ಥಿಗಳು ಪುಸ್ತಕಗಳ ಜೊತೆಗೆ ಪರಿಸರದ ಕಡೆಗೆ ಗಮನಹರಿಸಬೇಕು. ವಿದ್ಯಾರ್ಥಿಗಳು ತಮ್ಮ ಅಮೂಲ್ಯವಾದ ಸಮಯವನ್ನು ವ್ಯರ್ಥ ಮಾಡದೆ ವಿದ್ಯಾಭ್ಯಾಸ ಮಾಡಬೇಕು ಎಂದರು. ಇಂದಿನ ವಿದ್ಯಾರ್ಥಿಗಳು ಪುಸ್ತಕಕ್ಕೆ ಸೀಮಿತವಾಗಿದ್ದು, ಸಮಾಜದಲ್ಲಿನ ವಿಚಾರಗಳನ್ನು ಅರಿಯದೇ ಜೀವನ ನಿರ್ವಹಣೆ ಕಷ್ಟಸಾಧ್ಯವಾಗಿ ವಿಚಲಿತರಾಗುತ್ತಿದ್ದಾರೆ. ಕಾಲೇಜು ಸಂದರ್ಭದಲ್ಲಿ ಉತ್ತಮ ಸ್ನೇಹ ಬಾಂದವ್ಯ ಬೆಳಿಸಿಕೊಂಡು ಶೈಕ್ಷಣಿಕ ಪ್ರಗತಿ ಸಾಧಿಸಿದರೆ ಉತ್ತಮ ಜೀವನ ರೂಪಿಸಿಕೊಳ್ಳಬಹುದು ಎಂದರು.ಸಿಕ್ಯಾಬ್ ಪಿಯು ಕಾಲೇಜುಗಳ ಡೀನ್ ಎನ್.ಎಸ್.ಬೂಸನೂರ ಅವರು ಮಾತನಾಡಿ ವಿದ್ಯಾರ್ಥಿಗಳಾದವರು ಕೇವಲ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳ ಮೇಲೆ ಸಿಮಿತವಾಗಿರಬಾರದು, ಅದಕ್ಕಿಂತ ಹೆಚ್ಚಿನದನ್ನು ಇತರ ವಿಷಯಗಳಲ್ಲೂ ಜ್ಞಾನಾರ್ಜನೆಯನ್ನು ಪಡೆಯಬೇಕು.ಈ ಎರಡು ವರ್ಷಗಳು ನಿಮ್ಮ ಭವಿಷ್ಯವನ್ನು ನಿರ್ಧರಿಸುತ್ತವೆ. ಹಾಗೆಯೇ ತಮ್ಮ ಪೋಷಕರು ಮತ್ತು ಶಿಕ್ಷಕರ ನೀರೀಕ್ಷೆಗಳನ್ನು ಈಡೇರಿಸಲು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು. ಮತ್ತು ಅಧ್ಯಯನದಲ್ಲಿ ಉತ್ತಮ ಸಾಧನೆ ಮಾಡಲು ತಮ್ಮ ಶಿಕ್ಷಕರ ಸಂಪೂರ್ಣ ಸಹಾಯ ಮತ್ತು ಮಾರ್ಗದರ್ಶನ ಪಡೆದುಕೊಳ್ಳುವಂತೆ ಅವರು ಪ್ರೇರೇಪಿಸಿದರು.

ಕಾರ್ಯಕ್ರಮದ ಸ್ವಾಗತ ಹಾಗೂ ನಿರೂಪಣೆಯನ್ನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಾದ ಆಯಿಶಾ ಜಾಘಿರದಾರ, ಸ್ವಾಲೇಹಾ ಶೇಖ್, ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಎಂ. ಎಂ. ಗುರಡಿ, ಉಪ ಪ್ರಾಂಶುಪಾಲರಾದ ಡಾ. ಸಾದಿಕಾ ದಫೇದಾರ, ಹಾಗೂ ಉಪನ್ಯಾಸಕರಾದ ಎಸ್. ಆರ್. ಬ್ಯಾಕೋಡ, ಯು. ಎನ್. ಕುಂಟೋಜಿ, ರಿಯಾಜ್ ಜೀರಗಾಳ, ಮತ್ತಿತರರು ಹಾಗೂ ವಿದ್ಯಾರ್ಥಿಗಳು ಭಾಗಿಯಾಗಿದ್ದರು.

# ಡಿವೈಎಸ್ಪಿ ಬಸವರಾಜ ಯಲಿಗಾರ ಅವರಿಗೆ ವಿವಿಧ ಸಂಘಟನೆಗಳಿಂದ ಸನ್ಮಾನ



**ವಿಜಯಪುರ :** "ನನ್ನೊಳಗಿನ ನಾನು ನೀನೇ "ಎಂಬ ಕೃತಿಯ ಮೂಲಕ ಶ್ರೇಷ್ಠ ವಚನ ಸಾಹಿತ್ಯವನ್ನು ಇಂಗ್ಲಿಷಿಗೆ ಅನುವಾದ ಮಾಡಿ .ವಿಶ್ವ ಸಾಹಿತ್ಯಕ್ಕೆ ಬಹುದೊಡ್ಡ ಕೊಡುಗೆಯನ್ನು ವಿಜಯಪುರ ಜಿಲ್ಲೆಯ ಹೆಮ್ಮೆಯ ದಕ್ಷ ಜಿಲ್ಲಾ ಹೆಚ್ಚುವರಿ ಪೋಲೀಸ್ ವರಿಷ್ಠಾಧಿಕಾರಿ ಬಸವರಾಜ ಯಲಿಗಾರ ಸಾಹೇಬರು ನೀಡಿದ್ದಾರೆ. ಈ ಶ್ಲಾಘನೀಯ ಕಾರ್ಯವನ್ನು ಎಷ್ಟು ಕೊಂಡಾಡಿದರು ಕಡಿಮೆಯೇ ಎಂದು ಕಿತ್ತೂರು ಕರ್ನಾಟಕ ಪಂಚಸೇನೆ ಸಂಚಾಲಕ. ಯುವ ಮುಖಂಡ ಶರಣ ಬಸಪ್ಪ ಗಂಗಶಟ್ಟಿ ನುಡಿದರು.

ನಗರದ ಗಾಂಧಿ ವೃತ್ತ ಪೋಲಿಸ್ ಠಾಣೆಯಲ್ಲಿ ವಿವಿಧ ಸಂಘಟನೆಗಳ ಪದಾಧಿಕಾರಿಗಳೊಂದಿಗೆ ದಿನಾಂಕ 04–07–2025 ರಂದು ಸಾಯಂಕಾಲ ಬೇಟಿಯಾಗಿ ಡಿವೈಎಸ್ಪೀ ಬಸವರಾಜ ಯಲಿಗಾರ ಸಾಹೇಬರಿಗೆ ಶಾಲು ಹೊದಿಸಿ ಫಲಪುಷ್ಪ ವಿತರಿಸಿ ವಿಶ್ವಗುರು ಬಸವಣ್ಣನವರ ಭಾವಚಿತ್ರ ನೀಡಿ ಗೌರವಿಸಿ ಮಾತನಾಡಿದರು. ಪಂಚಸೇನೆ ಜಿಲ್ಲಾ ಅಧ್ಯಕ್ಷ ಸಂತೋಷ ಮುಂಜಣ್ಣಿ ಬಸವಾದಿ ಶರಣರು ಜನಿಸಿದ ನಾಡಲ್ಲಿ ಪೋಲೀಸ್ ಅಧಿಕಾರಿಗಳು ಶರಣರ ತತ್ವ ಚಿಂತನೆ ಮೈಗೂಡಿಸಿಕೊಂಡುಕಲೆ.ಸಾಹಿತ್ಯ.ಸಮಾಜ ಸೇವೆಯ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತಿರುವುದು ಸಂತೋಷದ ವಿಷಯ. ಶ್ರೀಯುತರ ಕಾರ್ಯ ಇನ್ನೂ ಮುಂದುವರೆಯಲಿ ಇನ್ನೂ ಹೆಚ್ಚಿನ ಕೃತಿ ಪುಷ್ಪಗಳು ಹೊರಹೊಮ್ಮಿ ಭಾರತೀಯ ಮತ್ತು ವಿಶ್ವ ಸಾಹಿತ್ಯಕ್ಕೂ ಹೆಚ್ಚಿನ ಕೊಡುಗೆ ನೀಡಲಿ ಎಂದು ಆಶಿಸಿದರು.

ಉತ್ತರ ಕರ್ನಾಟಕ ಸಮಗ್ರ ಅಭಿವೃದ್ಧಿ ಹೋರಾಟ ವೇದಿಕೆ ಬೆಂಗಳೂರು ಜಿಲ್ಲಾ ಸಂಚಾಲಕ.ನ್ಯಾಯವಾದಿ ದಾನೇಶ ಅವಟಿ ಮಾತನಾಡಿ.ಬಸವರಾಜ ಯಲಿಗಾರ ಸಾಹೇಬರು ಜಗಜ್ಯೋತಿ ಬಸವೇಶ್ವರ ಸಾವಿರಾರು ಮೌಲಿಕ ವಚನಗಳನ್ನು ಇಂಗ್ಲೀಷಕ್ಕೆ ಕೇವಲ ಭಾಷಾಂತರವಲ್ಲ ಭಾವಂತರ ಮಾಡುವ ಮೂಲಕ ಓದುಗರ ಗಮನ ಸೆಳೆದಿದ್ದಾರೆ.

ನಾಡಿನ ಪೋಲೀಸ್ ಇಲಾಖೆಯ ಖಾಖಿ ಭಟ್ಟೆಯಲ್ಲಿಯು ಕವಿ.ಸಾಹಿತಿ.ಶ್ರೇಷ್ಠ ಚಿಂತಕ ಹೃದಯದವರು ಇದ್ದಾರೆಂಬುದನ್ನು ಸಾಬೀತುಪಡಿಸಿದ್ದಾರೆ. ಶ್ರೇಷ್ಠ ವಾಗ್ಮಿಗಳು.ವಿವಿಧ ಭಾಷೆಗಳ ಮೇಲೆ ಪ್ರಭುತ್ವ ಹೊಂದಿರುವ ಶ್ರಿಯುತರಿಂದ ಇಂಥಹ ಹಲವಾರು ಶ್ರೇಷ್ಠ ಕಾರ್ಯ ಗಳಾಗಲಿ.ಪ್ರಶಸ್ತಿ ಪುರಸ್ಕಾರ ಮೂಡಿಗೇರಿ.ಪೋಲೀಸ್ ಇಲಾಖೆಯ ಹಾಗೂ ಕನ್ನಡಮ್ಮನ ಹಿರಿಮೆ ಗರಿಮೆಗಳನ್ನು ಹೆಚ್ಚಿಸಲಿ ಎಂದು ಹೃದಯಪೂರ್ವಕವಾಗಿ ಹಾರೈಸಿದರು.ಸನ್ಮಾನ ಸ್ವೀಕರಿಸಿ ಮಾತನಾಡಿದ

ಡಿವೈಎಸ್ಪೀ ಬಸವರಾಜ ಯಲಿಗಾರ ಸಾಹೇಬರು ತಾವು ಮಾಡಿದ ಅಳಿಲು ಸೇವೆಗೆ ಪ್ರತಿಯಾಗಿ ಜನರು ಗೌರವ ಅಭಿಮಾನ ನೀಡುತ್ತಿರುವುದು ಕಂಡು ಹೃದಯ ತುಂಬಿ ಬಂದಿದೆ. ಇಲ್ಲಿ ನಾನು ನಿಮಿತ್ಯ ಮಾತ್ರ ಲೇಖನಿಯಂತೆ ಕಾರ್ಯ ಮಾಡಿದ್ದು.ಎಲ್ಲವೂ ಬಸವಾದಿ ಶರಣರ ಇಚ್ಛೆಯಂತೆ ಸಾಗಿದೆ. ಅವರ ಆಶೀರ್ವಾದ. ಆತ್ಮೀಯರ.ಸಹೃದಯರ ಆಶಯದಂತೆ ಇನ್ನೂ ಹೆಚ್ಚಿನ ಸಾಹಿತ್ಯ ಸೇವೆ ಮಾಡುವ ಹುಮ್ಮಸ್ಸು ಬಂದಿದೆ.ಪೋಲೀಸ್ ವೃತ್ತಿಜೀವನದ ಕಾಯಕ ಸೇವೆಯೊಂದಿಗೆ.ಸಾಹಿತ್ಯವೆಂಬ ದಾಸೋಹ ಕಾರ್ಯ ವನ್ನು ಮುಂದುವರೆಸುವುದಾಗಿ ತಿಳಿಸಿ.ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಶಾರದಾ ಶಿಕ್ಷಣ ಸಂಸ್ಥೆ ಅಧ್ಯಕ್ಷ ಮಸ್ತಾನ್ ಹುಡೇದ. ವಿಜಯ ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾ ಉಪಾಧ್ಯಕ್ಷ ಸಂಜು ಗುಂದಗಿ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಶಿಕ್ಷಕ ಸಂತೋಷಗೆ ಬಸವ ಚೇತನ ಪ್ರಶಸ್ತಿ ಪ್ರದಾನ




**ಇಂಡಿ:**ರವಿವಾರಜುಲೈ6ರಂದುವಿಜಯಪುರನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಅಮ್ಮ ಫೌಂಡೇಶನ್ ವತಿಯಿಂದ ಜರುಗಿದ ರಾಜ್ಯ ಮಟ್ಟದ ಬಸವ ಸಂಸ್ಕೃತಿ ಉತ್ಸವ ಸಮಾರಂಭದಲ್ಲಿ ತಾಲೂಕಿನ ಹಿರೇರೂಗಿ ಗ್ರಾಮದ ಯುಬಿಎಸ್ ಶಾಲೆಯ ಇಂಗ್ಲೀಷ್ ಶಿಕ್ಷಕ ಸಂತೋಷ ಬಂಡೆ ಅವರಿಗೆ 'ರಾಜ್ಯ ಮಟ್ಟದ ಬಸವ ಚೇತನ ಪ್ರಶಸ್ತಿ' ಯನ್ನು ಪ್ರದಾನ ಮಾಡಲಾಯಿತು. ಈ ಸಂದರ್ಭದಲ್ಲಿ ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ, ಆಲಮೇಲ ವಿರಕ್ತಮಠದ ಜಗದೇವ ಮಲ್ಲಿ ಬೊಮ್ಮ ಸ್ವಾಮೀಜಿ, ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಮಲ್ಲಿಕಾ ಘಂಟಿ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಕುಲಪತಿ ವಿಜಯಾ ಕೋರಿಶೆಟ್ಟಿ, ಧಾರವಾಡ ಬಾಲ ವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ, ವಿಜಯಪುರ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ.ಪ್ರಭುಗೌಡ ಲಿಂಗದಳ್ಳಿ, ಎಸ್ ಎಂ ಪಾಟೀಲ ಗಣಿಹಾರ, ಎ ಎಂ ತಾಂಬೋಳಿ, ಅಮ್ಮ ಫೌಂಡೇಶನ್ ಸಂಚಾಲಕ ಕಬೂಲ ಕೊಕಟನೂರ ಸೇರಿದಂತೆ ಅನೇಕ ಗಣ್ಯರು ಪ್ರಶಸ್ತಿ ವಿತರಿಸಿದರು.

# ವಿದ್ಯಾರ್ಥಿಗಳು ಶಿಷ್ಯವೇತನಗಳನ್ನು ಸದ್ಬಳಕೆ ಮಾಡಿಕೊಂಡು ಉನ್ನತ ಶಿಕ್ಷಣ ಪಡೆಯಬೇಕು: ಕೋರಿಶೆಟ್ಟಿ




**ವಿಜಯಪುರ :** ವಿದ್ಯಾರ್ಥಿಗಳು ಅಂತರಾಷ್ಟ್ರೀಯ ಮಟ್ಟದಷ್ಟೇ ಅಲ್ಲದೆ, ಭಾರತ ಮತ್ತು ಕರ್ನಾಟಕ ಸರ್ಕಾರಗಳಿಂದ ನೀಡಲಾಗುವ ಶಿಷ್ಯವೇತನಗಳನ್ನು ಸದ್ಬಳಕೆ ಮಾಡಿಕೊಂಡು ಉನ್ನತ ಶಿಕ್ಷಣ ಪಡೆಯಬೇಕು ಎಂದು ಮಹಿಳಾ ವಿವಿಯ ಕುಲಪತಿ ಪ್ರೊ. ವಿಜಯಾ ಬಿ. ಕೋರಿಶೆಟ್ಟಿ ಹೇಳಿದರು.

ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಉದ್ಯೋಗ ಮತ್ತು ವೃತ್ತಿ ಸಮಾಲೋಚನಾ ಕೋಶ, (ಐಕ್ಯೂಎಸಿ) ಹಾಗೂ ಅಂತರಾಷ್ಟ್ರಿಯ ಕೋಶದ ವತಿಯಿಂದ ಆಯೋಜಿಸಿದ್ದ 'ವಿದೇಶದಲ್ಲಿ ಉನ್ನತ ವ್ಯಾಸಂಗ ಹಾಗೂ ಉದ್ಯೋಗ' ಎಂಬ ವಿಷಯದ ಕುರಿತು ಒಂದು ದಿನದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು ವಿದೇಶದಲ್ಲಿ ವಿದ್ಯಾಭ್ಯಾಸ ಮಾಡುವುದು ವಿಶೇಷವಾಗಿ ಮಹಿಳೆಯರಿಗೆ ಉನ್ನತ ಮಟ್ಟದ ಸಾಧನೆ ಮತ್ತು ಎಲ್ಲಾ ಕ್ಷೇತ್ರಗಳಲ್ಲಿ ಮುನ್ನಡೆಯಲು ಉತ್ತಮ ಅವಕಾಶವನ್ನು ಒದಗಿಸುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ವಿದ್ಯಾಲೋಕ ಅಂತರಾಷ್ಟ್ರೀಯ ಶಿಕ್ಷಣ ಮತ್ತು ವಲಸೆ ಸಲಹಾಗಾರರಾದ ಕೃಷ್ಣಾ ಸಾಗರ, ಹರ್ಷಾ ಹಾಗೂ ಸೈಹಿದಾ ಮಲಿಹಾನಾಜ್ ಮಾತನಾಡಿ, ವಿದೇಶಿ ವಿಶ್ವವಿದ್ಯಾಲಯಗಳ ವಿವರ, ವಿವಿಧ ಕೋರ್ಸ್‌ಗಳು, ಶಿಷ್ಯವೇತನ ಸೌಲಭ್ಯಗಳು ಹಾಗೂ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದಿಂದ ಎಸ್.ಸಿ, ಎಸ್.ಟಿ. ಹಾಗೂ ಓ.ಬಿ.ಸಿ. ವಿದ್ಯಾರ್ಥಿಗಳಿಗೆ ಲಭ್ಯವಿರುವ ಶಿಷ್ಯವೇತನ ಯೋಜನೆಗಳ ಬಗ್ಗೆ ಅವರು ಸಮಗ್ರ ಮಾಹಿತಿಯನ್ನು ನೀಡಿದರು.

ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳು ಪ್ರವೇಶ ಪಡೆದು ಯಶಸ್ವಿಯಾಗಿ ಮುಂದುವರೆದಿರುವ ಉದಾಹರಣೆಗಳನ್ನು ಅವರು ವಿವರಿಸಿದರು.

ಕಾರ್ಯಾಗಾರದ ಅಧ್ಯಕ್ಷತೆ ವಹಿಸಿದ್ದ ಮಹಿಳಾ ವಿವಿಯ ಕುಲಸಚಿವ ಶಂಕರಗೌಡ ಸೋಮನಾಳ ಮಾತನಾಡಿ, ವಿದ್ಯಾರ್ಥಿಗಳು ಸರ್ಕಾರದಿಂದ ಲಭ್ಯವಿರುವ ಶಿಷ್ಯವೇತನ ಹಾಗೂ ಇತರೆ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಲುಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದರು. ಜೊತೆಗೆ ವಿದೇಶಿ ವಿಶ್ವವಿದ್ಯಾಲಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಆಸಕ್ತಿದಾಯಕ ಪ್ರಶ್ನೆಗಳನ್ನೂ ಕೇಳಿದರು.

ಕಾರ್ಯಕ್ರಮದಲ್ಲಿ ಪ್ರೊ.ಪಿ.ಜಿ.ತಡಸದ, ಡಾ. ಗವಿಸಿದ್ದಪ್ಪ ಆನಂದಹಳ್ಳಿ, ಪ್ರೊ. ವಿಷ್ಣು ಶಿಂದೆ, ಡಾ. ಪ್ರಕಾಶ ಸನ್ನಕ್ಕನವರ ಹಾಗೂ ಬೋಧಕ, ಬೋಧಕೇತರ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು. ಡಾ.ಬಾಬು ಆರ್.ಎಲ್. ಪ್ರಾಸ್ತಾವಿಕ ನುಡಿಗಳನ್ನಾಡಿ ಸ್ವಾಗತಿಸಿದರು.

# ವೇತನ, ಪಿಂಚಣಿ, ಸಾಮಾಜಿಕ ಭದ್ರತೆ ಖಚಿತಗೊಳಿಸಿ



**ಜಮಖಂಡಿ :** ಅಸಂಘಟಿತ ವಲಯದ ಕಾರ್ಮಿಕರು, ಗುತ್ತಿಗೆ ಕಾರ್ಮಿಕರು ಸಹಿತ ಎಲ್ಲ ಕ್ಷೇತ್ರದ ಕಾರ್ಮಿಕರಿಗೆ ಪ್ರತಿ ತಿಂಗಳಿಗೆ 26 ಸಾವಿರ ರೂ. ಕನಿಷ್ಠ ವೇತನ, 9 ಸಾವಿರ ರೂ. ಪಿಂಚಣಿ ಮತ್ತು ಸಾಮಾಜಿಕ ಭದ್ರತೆ ಖಚಿತ ಪಡಿಸಬೇಕೆಂದು ಎಐಯುಟಿಯುಸಿ ತಾಲೂಕಾಧ್ಯಕ್ಷೆ ಕಸ್ತೂರಿ ಅಂಗಡಿ ಹೇಳಿದರು.

ನಗರದ ತಾಲೂಕಾಡಳಿತ ಕಛೇರಿ ಎದುರಿಗೆ ಬುಧವಾರ ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರದ ಅಂಗನವಾಡಿ ಕಾರ್ಯಕರ್ತರು, ಆಶಾ ಕಾರ್ಯಕರ್ತರು ಮತ್ತು ಕಾರ್ಮಿಕ ವಲಯ ಹಮ್ಮಿಕೊಂಡಿದ್ದ ಕೇಂದ್ರ ಮತ್ತು ರಾಜ್ಯ ಸರಕಾರಗಳ ಕಾರ್ಮಿಕ ವಿರೋಧಿ ನೀತಿ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

ಬೆಲೆ ಏರಿಕೆಯನ್ನು ನಿಯಂತ್ರಿಸಿ, ಆಹಾರ, ಯಂತ್ರೋಪಕರಣಗಳಂತಹ ಅಗತ್ಯ ವಸ್ತುಗಳ ಬೆಲೆ,ಪೆಟ್ರೋಲಿಯಂ ಉತ್ಪನ್ನಗಳು ಮತ್ತು ಅಡುಗೆ ಅನಿಲ, ಔಷಧಿಗಳು, ಕೃಷಿ ಇವೆಲ್ಲವುಗಳ ಮೇಲಿನ ತೆರಿಗೆ ತೆಗೆದು ಹಾಕಬೇಕು. ಕೇಂದ್ರ ಅಬಕಾರಿ ಸುಂಕವನ್ನು ಗಣನೀಯವಾಗಿ ಕಡಿಮೆಗೊಳಿಸಬೇಕು. ಆಹಾರ ಭದ್ರತೆ ಖಾತರಿ ಪಡಿಸಿ ಸಾರ್ವಜನಿಕ ವಿತರಣಾ ವ್ಯವಸ್ಥೆ ಸಾರ್ವತ್ರಿಕರಣ ಗೊಳಿಸಬೇಕು. ಸಾರ್ವಜನಿಕ ವಲಯದ ಉದ್ಯಮಗಳು, ಸರ್ಕಾರಿ ಇಲಾಖೆಗಳ ಖಾಸಗೀಕರಣ ನಿಲ್ಲಿಸಬೇಕು. ವಿದ್ಯುತ್ (ತಿದ್ದುಪಡಿ) ಮಸೂದೆಯನ್ನು ಹಿಂತೆಗೆದುಕೊಳ್ಳಬೇಕು.

ಎಲ್ಲರಿಗೂ ಉಚಿತ ಶಿಕ್ಷಣ, ಆರೋಗ್ಯದ ಹಕ್ಕು, ನೀರು ಮತ್ತು ನೈರ್ಮಲ್ಯ ಹಕ್ಕನ್ನು ಖಾತರಿ ಪಡಿಸುವ ಮೂಲಕ ಹೊಸ ಶಿಕ್ಷಣ ನೀತಿಯನ್ನು ರದ್ದುಗೊಳಿಸಬೇಕೆಂದರು. ಕಲ್ಯಾಣ ನಿಧಿಯಿಂದ ಕೊಡುಗೆಗಳೊಂದಿಗೆ ನಿರ್ಮಾಣ ಕಾರ್ಮಿಕರಿಗೆ ವ್ಯಾಪ್ತಿ ನೀಡಿ, ಇ–ಶ್ರಮ್ ಪೋರ್ಟಲದಲ್ಲಿ ನೋಂದಾಯಿಸಲಾದ ಎಲ್ಲಾ ಕಾರ್ಮಿಕ–ರಿಗೆ ಆರೋಗ್ಯ ಸಹಿತ ಯೋಜನೆಗಳು ಲಭಿಸಬೇಕು. ಮಾತೃತ್ವ, ಜೀವ ಮತ್ತು ಅಂಗವೈಕಲ್ಯ ವಿಮೆ ವ್ಯಾಪ್ತಿಯನ್ನು ಗೃಹ ಕಾರ್ಮಿಕರುಮತ್ತುಗೃಹಾಧಾರಿತಕಾರ್ಮಿಕ–ರಿಗೆ ಲಭಿಸಬೇಕು. ಸೂಕ್ತ ಕಾನೂನುಗಳನ್ನು ಮಾಡುವ ಮೂಲಕ ವಲಸೆ ಕಾರ್ಮಿಕರ ಕುರಿತು ಸಮಗ್ರನೀತಿ ರೂಪಿಸಬೇಕು. ಅಸ್ತಿತ್ವದಲ್ಲಿರುವ ಅಂತರ–ರಾಜ್ಯ ವಲಸೆ ಕಾರ್ಮಿಕರು (ಉದ್ಯೋಗ ನಿಯಂತ್ರಣ) ಕಾಯ್ದೆಯನ್ನು ಬಲಪಡಿಸಬೇಕೆಂದರು.

ಪ್ರತಿಭಟನೆಯಲ್ಲಿ ಕಾರ್ಯದರ್ಶಿ ಶೋಭಾ ಪಾಟೀಲ, ಸುನಂದಾ ಬಿಜ್ಜರಗಿ, ಗೌರವ್ವ ಮೈಗೂರ, ಆರ್. ಎಂ. ಶೇಗುಣಸಿ, ವಿ. ಬಿ. ಕೋರೆಮಠ, ಬಿ. ಪಿ. ಹಿರೇಮಠ, ಮಾಲಾ ಮುಳಿಕ, ಕೆ. ಎಂ. ಹೊಳೆನ್ನವರ, ಎಂ. ಎಸ್. ಕಾತ್ರಾಳ, ಐ. ಎಸ್. ಹಿರೇಮಠ, ದ್ರಾಕ್ಷಾಯಣಿ ನಂದೇಶ್ವರ, ಛಾಯಾ ಲಗಳಿ, ಅಂಜನಾ ಕುಂಬಾರ, ಗಂಗು ಬಿರಾದಾರ, ಸುನೀತಾ ಜಂಬಗಿ, ಮಂಜುಳಾ ಸರಿಕರ, ಎನ್. ಎಸ್. ಸನದಿ, ಸಾವಿತ್ರಿ ಯಲ್ಲಟ್ಟಿ, ಎಸ್. ಎಂ. ಓಣಿ, ಸಿ. ಎಚ್. ನ್ಯಾಮಗೌಡ, ಆಶಾ ಲಕ್ಕಪ್ಪಗೋಳ ಎಸ್. ಕೆ. ದೊಡಮನಿ ಸಹಿತ ನೂರಾರು ಸಂಖ್ಯೆಯಲ್ಲಿ ಕಾರ್ಮಿಕರು ಪಾಲ್ಗೊಂಡಿದ್ದರು.

ನಗರದ ಎ. ಜಿ. ದೇಸಾಯಿ ವೃತ್ತದಿಂದ ಆರಂಭಗೊಂಡ ಪ್ರತಿಭಟನೆ ರ್ಯಾಲಿ ಕುಡಚಿ ಮಾರ್ಗವಾಗಿ ತಾಲೂಕಾಡಳಿತ ತಲುಪಿತು. ನಂತರ ತಹಶೀಲ್ದಾರ ಸದಾಶಿವ ಮಕ್ಕೊಜಿ ಅವರಿಗೆ ಮನವಿ ಸಲ್ಲಿಸಿದರು.

# ಎನ್.ತಿಪ್ಪಣ್ಣ ನಿಧನ: ಶ್ರೀಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠದ ಬಸವಲಿಂಗ ಮಹಾಸ್ವಾಮಿ ಸಂತಾಪ





**ಬಳ್ಳಾರಿ :** ಹಿರಿಯ ನ್ಯಾಯವಾದಿ, ರಾಜ್ಯ ವಿಧಾನ ಪರಿಷತ್ತಿನ ಮಾಜಿ ಸಭಾಪತಿ ಎನ್. ತಿಪ್ಪಣ್ಣ ಅವರ ಅಗಲಿಕೆ ಆಘಾತ ತಂದಿದೆ ಎಂದು ಶ್ರೀಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠದ ಬಸವಲಿಂಗ ಮಹಾಸ್ವಾಮಿಗಳು ಸಂತಾಪವನ್ನು ವ್ಯಕ್ತಪಡಿಸಿದರು.

ಈ ಕುರಿತು ಅವರು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಎನ್.ತಿಪ್ಪಣ್ಣ ನಮ್ಮ ಶ್ರೀಮಠದ ಅಭಿಮಾನಿಗಳೂ, ಹಿರಿಯ ರಾಜಕೀಯ ಮುತ್ಸದ್ದಿಗಳೂ ಹಾಗೂ ಅಖಿಲ ಭಾರತ ವೀರಶೈವ ಮಹಾಸಭೆಯ ರಾಜ್ಯಾಧ್ಯಕ್ಷರಾಗಿದ್ದರು, 97 ವರ್ಷಗಳ ಸಾರ್ಥಕ ಜೀವನ ನಡೆಸಿ ಇಂದು ಲಿಂಗೈಕ್ಯರಾಗಿದ್ದು ನಾಡಿಗೆ ಅದರಲ್ಲೂ ಬಳ್ಳಾರಿ ಜಿಲ್ಲೆಗೆ ಬಹುದೊಡ್ಡ ನಷ್ಟವನ್ನುಂಟಾಗಿದೆ,

ಶ್ರೀಯುತರು ಅಧ್ಯಾತ್ಮಿಕ, ರಾಜಕೀಯ, ಶೈಕ್ಷಣಿಕ ಹಾಗೂ ಸಾಹಿತ್ಯಕ ಕ್ಷೇತ್ರಗಳಲ್ಲಿ ಸಲ್ಲಿಸಿದ ಸೇವೆಯು ಅನುಪಮವಾದುದು. ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘದ ಶ್ರೇಯೋಭಿವೃದ್ಧಿಗೆ ನಿರಂತರವಾಗಿ ಮಾರ್ಗದರ್ಶನ ಮಾಡುತ್ತ ಬಂದಿದ್ದು ಅವರಲ್ಲಿನ ಶಿಕ್ಷಣ ಪ್ರೇಮವನ್ನು ತೋರಿಸುತ್ತದೆ.

ಅವರು ನಮ್ಮ ಗುರುಗಳೊಂದಿಗೆ ಉತ್ತಮ ಸಂಬಂಧವನ್ನು ಹೊಂದಿ ಮಠದ ಎಲ್ಲಾ ಯಶಸ್ವಿ ಕಾರ್ಯಗಳಲ್ಲಿ ಜೊತೆಯಾಗಿರುತ್ತಿದ್ದರು. ಈ ಮಠಕ್ಕೆ ನಾವು ಗುರುಗಳಾಗಿ ಬಂದ ಮೇಲೂ ಮಠದೊಂದಿಗೆ ತಮ್ಮ ಒಡನಾಟವನ್ನು ಮುಂದುವರೆಸಿದ್ದ ತಿಪ್ಪಣ್ಣನವರು ಮಠ ಮತ್ತು ಸಮಾಜದ ಅಭಿವೃದ್ಧಿಗೆ ನಮ್ಮೊಂದಿಗೆ ಹಲವಾರು ವಿಚಾರಗಳನ್ನು ಮುಕ್ತವಾಗಿ ಚರ್ಚಿಸುತ್ತಿದ್ದುದು ಇನ್ನೂ ನಮ್ಮ ಕಣ್ಮುಂದೆ ಹಸಿರಾಗಿದೆ ಎಂದು ಅವರ ಒಡನಾಟವನ್ನು ನೆನಪಿಸಿಕೊಂಡರು.

ಅವರ ಅಗಲಿಕೆ ನಿಜಕ್ಕೂ ನಮಗೂ ಅಪಾರ ವೀರಶೈವ ಸಮುದಾಯದವರಿಗೂ ಮತ್ತು ಅವರ ರಾಜಕೀಯ ಅಭಿಮಾನಿಗಳಿಗೆದುಃಖವನ್ನುತಂದಿದೆ.ಶ್ರೀಜಗದ್ಗುರು ಕೊಟ್ಟೂರೇಶ್ವರರು ಅವರ ಆತ್ಮಕ್ಕೆ ಚಿರಶಾಂತಿಯನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ ಎಂದು ಶ್ರೀಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠದ ಬಸವಲಿಂಗ ಮಹಾಸ್ವಾಮಿಗಳು ಪತ್ರಿಕಾ ಪ್ರಕಾಟಣೆಯಲ್ಲಿ ತಿಳಿಸಿದ್ದಾರೆ.

# ಸಾಮಾಜಿಕ ನ್ಯಾಯದೊಂದಿಗೆ ಕನಿಷ್ಠ ವೇತನ ಅಗತ್ಯ: ರೇಣುಕಾ




**ಜಮಖಂಡಿ :** ಅಂಗನವಾಡಿ ನೌಕರರು ಐವತ್ತು ವರ್ಷದಿಂದ ಐಸಿಡಿಎಸ್ ಯೋಜನೆಯಲ್ಲಿ ದುಡಿಯುತ್ತಿದ್ದು, ಸಾಮಾಜಿ–ಕ ನ್ಯಾಯ ನೀಡುವ ಮೂಲಕ ಕನಿಷ್ಠವೇತನ ಜಾ–ರಿಗೊಳಿಸಬೇಕೆಂದು ರಾಜ್ಯ ಅಂಗನವಾಡಿಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘದ ತಾಲೂಕಾಧ್ಯಕ್ಷೆ ರೇಣುಕಾ ಪೂಜಾರಿ ಹೇಳಿದರು.

ನಗರದ ತಾಲೂಕಾಡಳಿತ ಕಛೇರಿ ಎದುರಿಗೆ ಕೇಂದ್ರ ಮತ್ತು ರಾಜ್ಯ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ವಿರೋಧಿಸಿ ಅಂಗನವಾಡಿ ಕಾರ್ಯಕರ್ತರು, ಗ್ರಾಮ ಪಂಚಾಯತ್ ನೌಕರರು ಮತ್ತು ಆಶಾ ಕಾರ್ಯಕರ್ತೆಯರು ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

ದೇಶದಲ್ಲಿ ಕಾರ್ಪೋರೇಟರ–ರಿಗೆ 15.32 ಲಕ್ಷ ಕೋಟಿ ರೂ. ಸಾಲಮನ್ನಾ, 1.೯7 ಲಕ್ಷ ಕೋಟಿ ರೂ. ಸಬ್ಸಿಡಿ ನೀಡುವ ಕೇಂದ್ರ ಸರ್ಕಾರಕ್ಕೆ ಮಾನವ ಸಂಪನ್ಮೂಲದ ಬೆಳವಣಿಗೆಗಳಿಗೆ ದುಡಿಯುತ್ತಿರುವ ನೌಕರರಿಗೆ ಕೊಡಲು ಹಣವಿಲ್ಲ. ಸರ್ಕಾರದ ಸೌಲಭ್ಯಗಳಿಗಾಗಿ ಆಧಾರ ಕಡ್ಡಾಯವಲ್ಲ ಎಂದು ಸುಪ್ರಿಂ ಕೋರ್ಟ್ 2015 ರಲ್ಲಿ ನಿರ್ದೇಶನ ನೀಡಿದೆ.

2013 ರ ಆಹಾರ ಭದ್ರತಾ ಕಾಯ್ದೆ ಪ್ರತಿಪಾದಿಸುತ್ತಿದೆ. ಅಂಗನವಾಡಿ ನೌಕರರು ಮಾನಸಿಕ ನೋವು ಅನುಭವಿಸುತ್ತಿದ್ದಾರೆ.

ಐಸಿಡಿಎಸ್ ಉದ್ದೇಶ ಸಫಲತೆ ಮಾಡುವುದು ಹೇಗೆ ಎಂಬುದನ್ನು ತಾತ್ವಿಕವಾಗಿ ಚಿಂತಿಸಬೇಕಾಗಿದೆ ಎಂದರು.

ರಾಜ್ಯ ಸರ್ಕಾರ 2023 ಏಪ್ರಿಲ್ ಒಂದರಿಂದ ಗ್ರಾಚ್ಯುಟಿ ಪಾವತಿ ಕಾಯ್ದೆ ಅನ್ವಯದಿಂದ 287 ಕಾರ್ಯಕರ್ತರಿಗೆ ಮತ್ತು 1,204 ಸಹಾಯಕಿಯರಿಗೆಪಾವತಿಆಗಿದೆ. 2011 ರಿಂದ ನಿವೃತ್ತಿಗೊಂಡಿರುವ 10,311 ಕಾರ್ಯಕರ್ತೆಯರು, 11,೯80 ಸಹಾಯಕಿಯರಿಗೆ ಅನ್ವಯವಾಗಬೇಕು. ಗುಜರಾತ್ ಹೈಕೋರ್ಟ್ ತೀರ್ಪಿನಂತೆ ಅಂಗನವಾಡಿ ನೌಕರರನ್ನು ಖಾಯಂಗೊಳಿಸಬೇಕು. 2೯ ಕಾರ್ಮಿಕ ಕಾನೂನುಗಳನ್ನು ಉಳಿಸಿ, ಹೊಸದಾಗಿ ತಂದಿರುವ ನಾಲ್ಕು ಕಾನೂನು ರದ್ದು ಗೊಳಿಸಬೇಕು. ಐಸಿಡಿ–ಎಸ್ ಯೋಜನೆಗೆ ಬಜೆಟ್ ಹೆಚ್ಚಿಸಿ, ಫಲಾನುಭವಿಗಳಿಗೆ ಘಟಕ ವೆಚ್ಚ ಹೆಚ್ಚಿಸಬೇಕು. 26 ಸಾವಿರ ಕನಿಷ್ಠ ವೇತನ, 10 ಸಾವಿರ ರೂ. ಮಾಸಿಕ ಪಿಂಚಣಿ ಕೊಡಬೇಕು. ರಾಜ್ಯದಲ್ಲಿ ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲಿ ಎಲ್. ಕೆ.ಜಿ. ಪ್ರಾರಂಭ ಮಾಡಬೇಕು. ಅಂಗನವಾಡಿ ಕೇಂದ್ರಗಳಿಗೆ ಮೂಲಭೂತ ಸೌಕರ್ಯಗಳನ್ನು ನೀಡಬೇಕು. ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಬೇಕು. ಬಿ.ಎಲ್.ಓ ಮತ್ತು ಜನಗಣತಿ ಮುಂತಾದ ಕೆಲಸಗಳಿಗೆ ನೇಮಿಸಬಾರದು ಎಂದರು.

ಪ್ರತಿಭಟನೆಯಲ್ಲಿ ಕಾರ್ಯದರ್ಶಿ ಅನ್ನಪೂರ್ಣ ಕಾಮರೆಡ್ಡಿ, ಜಯಶ್ರೀ ಕಂದಗಲ್ಲ, ಎಸ್. ಜಿ. ಹಿರೇಮಠ,ಎಸ್.ಬಿ.ಗೊಳಸಂಗಿ, ಎಸ್. ವೈ. ಚಿಂಚಖಂಡಿ, ಎಸ್. ಕೆ. ಹೂಗಾರ,ಎಂ.ಬಿ.ಸೂರಗೊಂಡ, ಎಸ್. ಡಿ. ಗಡೆಪ್ಪನವರ, ಶಾಂತಾ ಚಿಂಚಖಂಡಿ,ಎಂ.ಎಂ.ಡುಮ್ಮಕಿ, ಬಿ. ಟಿ. ಗಡಬಿಡಿ, ಆರ್. ವೈ. ಬಡಿಗೇರ, ಸಿ. ಎಸ್. ರಾಘಾ, ಎಸ್. ಆರ್. ಅನಂತಪೂರ, ಎಸ್. ಎಂ. ಹವೇಲಿ, ಎಲ್. ಎಸ್. ಗಸ್ತಿ ಸಹಿತ ಇನ್ನೂ ಹಲವರು ಪಾಲ್ಗೊಂಡಿದ್ದರು.

# ಎನ್.ತಿಪ್ಪಣ್ಣ ನಿಧನ; ಶಾಸಕ ನಾರಾ ಭರತ್ ರೆಡ್ಡಿ ಸಂತಾಪ



**ಬಳ್ಳಾರಿ :** ಹಿರಿಯ ನ್ಯಾಯವಾದಿ, ರಾಜ್ಯ ವಿಧಾನ ಪರಿಷತ್ತಿನ ಮಾಜಿ ಸಭಾಪತಿ ಎನ್.ತಿಪ್ಪಣ್ಣ ಅವರ ಅಗಲಿಕೆ ಆಘಾತ ತಂದಿದೆ ಎಂದು ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ತಿಳಿಸಿದ್ದಾರೆ.

ಈ ಕುರಿತು ಶುಕ್ರವಾರ ಅವರು ಪತ್ರಿಕಾ ಪ್ರಕಟಣೆ ಮೂಲಕ ತಮ್ಮ ಅತೀವ ಸಂತಾಪವನ್ನು ವ್ಯಕ್ತಪಡಿಸಿದ್ದಾರೆ.

ತಿಪ್ಪಣ್ಣ ಅವರು ನನ್ನ ಮಾರ್ಗದರ್ಶಕರಾಗಿದ್ದರು, ನಾನು ಶಾಸಕನಾಗುವ ಮೊದಲು ಹಾಗೂ ನಂತರ ಸಾಕಷ್ಟು ಸಲ ಅವರನ್ನು ಭೇಟಿಯಾಗಿಅವರಆಶೀರ್ವಾದಪಡೆದಿರುವೆ,ಹಲವು ವಿಷಯಗಳಲ್ಲಿ ನನಗೆ ಅವರು ಸಲಹೆ ನೀಡಿದ್ದರು ಎಂದು ಶಾಸಕ ನಾರಾ ಭರತ್ ರೆಡ್ಡಿ ತಮ್ಮ ಹಾಗೂ ತಿಪ್ಪಣ್ಣ ಅವರ ಸಂಬಂಧವನ್ನು ನೆನಪಿಸಿಕೊಂಡಿದ್ದಾರೆ.

ತಿಪ್ಪಣ್ಣ ಅವರು ಸುದೀರ್ಘ ಬದುಕು ಸವೆಸಿದ್ದು, ನಮ್ಮಂತಹ ಯುವಕರಿಗೆ ಮಾದರಿ, ಅವರು ವಕೀಲರಾಗಿ, ಸರ್ಕಾರಿ ಅಭಿಯೋಜಕರಾಗಿ, ಶಿಕ್ಷಣ ಪ್ರೇಮಿಯಾಗಿ,

ವೀವಿ ಸಂಘವನ್ನು ಮತ್ತು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾವನ್ನು ಸಮರ್ಥವಾಗಿ ಸಂಘಟಿಸಿದ ಸಂಘಟಕರಾಗಿ, ವಿಧಾನ ಪರಿಷತ್ತಿನ ಸದಸ್ಯರಾಗಿ, ಸಭಾಪತಿಯಾಗಿ, ವೀರಶೈವ ಲಿಂಗಾಯತ ಸಮಾಜದ ಮುಖಂಡರಾಗಿ ಮಾಡಿದ ಸೇವೆಯನ್ನು ಕನ್ನಡ ನಾಡು ದೀರ್ಘ ಕಾಲ ನೆನಪಿನಲ್ಲಿಡಲಿದೆ ಎಂದು ಅಭಿಪ್ರಾಯ ಪಟ್ಟಿರುವ ಶಾಸಕ ನಾರಾ ಭರತ್ ರೆಡ್ಡಿ, ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿ ಅವರ ಅಭಿಮಾನಿಗಳು ಹಾಗೂ ಕುಟುಂಬಸ್ಥರಿಗೆ ದೊರೆಯಲಿ ಎಂದು ಶಾಸಕ ಭರತ್ ರೆಡ್ಡಿ ಪ್ರಾರ್ಥಿಸಿದ್ದಾರೆ.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State

Designed by MKG-9535762618